ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ

PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

Editor : SHIVAKUMAR. K.
M.: 81475 82389 / 9743641515

ಕನ್ನಡ ದಿನಪತ್ರಿಕೆ

₹2/-

ಸತ್ಯದ ಧ್ವನಿ

SKANDAGIRI VANI Kannada Daily THURSDAY | October 15, 2026 | Volume 01 | Issue 89 | Pages 4 |

# ಬದುಕು ಬಂದಂತೆ ಸ್ವೀಕರಿಸಿ, ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಿ

## ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ನ್ಯಾಯಾಧೀಶ ಟಿ.ಪಿ.ರಾಮಲಿಂಗೇಗೌಡ ಸಲಹೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಬದುಕಿನಲ್ಲಿ ಎದುರಾಗುವ ಸನ್ನಿವೇಶಗಳನ್ನು ಸ್ವೀಕರಿಸಿ, ಆಶಾವಾದಿ ಮನೋಭಾವ ಹಾಗೂ ಸಕಾರಾತ್ಮಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಮಾನಸಿಕ ಸಮಸ್ಯೆಗಳನ್ನು ಮುಚ್ಚಿಡದೆ ಸೂಕ್ತ ಸಮಯದಲ್ಲಿ ವೈದ್ಯರ ಸಲಹೆ ಮತ್ತು ಚಿಕಿತ್ಸೆ ಪಡೆಯುವುದರಿಂದ ಅವುಗಳನ್ನು ಪರಿಣಾಮಕಾರಿಯಾಗಿ ಎದುರಿಸಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಪಿ.ರಾಮಲಿಂಗೇಗೌಡ ಅವರು ತಿಳಿಸಿದರು.

ನಗರದ ಸಂತ ಜೋಸೆಫರ ಕಾನ್ವೆಂಟ್ ಬಾಲಕಿಯರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೈಹಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುವಂತೆ ಮಾನಸಿಕ ಕಾಯಿಲೆಗಳಿಗೂ ಚಿಕಿತ್ಸೆ ಪಡೆಯಬೇಕು.



ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಮುಚ್ಚಿಡದೆ ಕುಟುಂಬದ ಸದಸ್ಯರು, ಆತ್ಮೀಯರು ಹಾಗೂ ವೈದ್ಯರೊಂದಿಗೆ ಹಂಚಿಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಜನರಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಬೇಕು. ಆತ್ಮಹತ್ಯೆಯ ಆಲೋಚನೆ, ತೀವ್ರ ಮಾನಸಿಕ ಒತ್ತಡ ಅಥವಾ ತುರ್ತು ಪರಿಸ್ಥಿತಿ ಎದುರಾದಲ್ಲಿ ಸಮೀಪದ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಗೆ ಭೇಟಿ ನೀಡಬೇಕು. ಅಲ್ಲದೆ, ಟೆಲಿ–ಮಾನಸ್ 14416 ಸಹಾಯವಾಣಿಯ ಮೂಲಕ ಮಾನಸಿಕ ಆರೋಗ್ಯ ಸೇವೆ ಪಡೆಯಬಹುದು ಎಂದರು.

ಜಿಲ್ಲಾಧಿಕಾರಿ ಜಿ.ಪ್ರಭು ಮಾತನಾಡಿ, ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ ಮತ್ತು ಶಿಸ್ತುಬದ್ಧ ಜೀವನ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾಗುತ್ತವೆ. ಮಾನಸಿಕ ನೆಮ್ಮದಿಗೆ ವ್ಯಕ್ತಿಯ ಮನೋಭಾವವೂ ಮುಖ್ಯವಾಗಿದ್ದು, ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕು.ಜಗತ್ತಿನಲ್ಲಿರುವ 950 ಕೋಟಿ ಜನರಲ್ಲಿ 100 ಕೋಟಿ ಜನರು ಮಾನಸಿಕ ರೋಗಿಗಳು ಇದ್ದಾರೆ ಎಂದು ಮಾಹಿತಿ ಇದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಮಾತನಾಡಿ, ಪರೀಕ್ಷೆ ಸೇರಿದಂತೆ ಜೀವನದ ವಿವಿಧ ಹಂತಗಳಲ್ಲಿ ಒತ್ತಡ ಎದುರಾಗುವುದು ಸಹಜ. ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗದೆ ನಿರಂತರ ಅಭ್ಯಾಸ ಮತ್ತು ಪ್ರಯತ್ನಕ್ಕೆ ಆದ್ಯತೆ ನೀಡಬೇಕು. ಜೀವನದ ಯಾವುದೇ ಒಂದು ಕ್ಷಣ ಅಥವಾ ಪರೀಕ್ಷೆಯನ್ನು ಅಂತಿಮ ನಿರ್ಣಾಯಕ ಹಂತವೆಂದು ಭಾವಿಸಬಾರದು. ಸಮಸ್ಯೆಗಳನ್ನು ಧೈರ್ಯದಿಂದ ಸಂಬಂಧಪಟ್ಟವರೊಂದಿಗೆ ಹಂಚಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೆ.ವಿ.ಅಭಿಲಾಷ್ ಮಾತನಾಡಿ, ಖಿನ್ನತೆ, ಆತಂಕ, ವ್ಯಸನ ಹಾಗೂ ಮಕ್ಕಳ ವರ್ತನೆ ಮತ್ತು ಭಾವನಾತ್ಮಕ ಸಮಸ್ಯೆಗಳನ್ನು ನಿರ್ಲಕ್ಷಿಸದೆ ಆರಂಭಿಕ ಹಂತದಲ್ಲಿಯೇ ಗುರುತಿಸಿ ತಜ್ಞರಿಂದ ಚಿಕಿತ್ಸೆ ಪಡೆಯುವುದು ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ವಿ.ಕಾಂತರಾಜು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರೇಮ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಚ್.ಸಿ.ಚೇತನ್, ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಅರುಳ್ ಅಮುದ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಶಿವಕುಮಾರ್, ಮನೋವೈದ್ಯರಾದ ಡಾ.ಜಿ.ಹೇಮಂತ್ ಕುಮಾರ್, ಡಾ.ಎ.ಲಾವಣ್ಯ, ಡಾ.ಜಿ.ಎಸ್.ಹರ್ಷಿತ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಮೈಕ್ರೋ ಫೈನಾನ್ಸ್‌ನಿಂದ ಮನೆ ಸೀಜ್



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಮನೆ ಮೇಲೆ ಮಾಡಿದ್ದ ಸಾಲ ಸಕಾಲಕ್ಕೆ ಮರುಪಾವತಿ ಮಾಡಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯದಿಂದ ಆದೇಶ ಪಡೆದ ಮೈಕ್ರೋ ಫೈನಾನ್ಸ್‌ವೊಂದು ಮನೆಯನ್ನು ಸೀಜ್ ಮಾಡಿ ಮನೆಯಲ್ಲಿದ್ದವರನ್ನು ಬೀದಿ ಪಾಲು ಮಾಡಿರುವ ಘಟನೆ ಇಂದು ನಡೆದಿದೆ. ಹಾಗಾದರೆ ಅವರು ಮಾಡಿದ್ದ ಸಾಲ ಎಷ್ಟು, ಮರು ಪಾವತಿ ಮಾಡಿದ್ದು ಎಷ್ಟು.

ನ್ಯಾಯಾಲಯದ ಆದೇಶದ ಮೇರೆಗೆ ಮೈಕ್ರೋ ಫೈನಾನ್ಸ್ ಹಾಕಿರುವ ಬೀಗ. ಮನೆ ಮುಂದೆ ಕುಳಿತು ಕಣ್ಣೀರು ಹಾಕುತ್ತಿದ್ದ ಮಹಿಳೆ, ಇವರಿಗೆ ಸೇರಿ ಈ ಮನೆಗೆ ಬೀಗ ಜಡಿದವರು ಎಯು ಫೈನಾನ್ಸ್‌ನವರಂತೆ. ಕಾರಣ ಮನೆ ಮೇಲೆ ಮಾಡಿದ್ದ ಸಾಲ ಮರುಪಾವತಿ ಮಾಡದ ಕಾರಣ, ಫೈನಾನ್ಸ್‌ನವರು ನ್ಯಾಯಾಲಯದ ಆದೇಶ ತಂದು ಇಂದು ಬೆಳಗ್ಗೆ ಮನೆ ಸೀಜ್ ಮಾಡಿಕೊಂಡು ಹೋಗಿದ್ದಾರೆ. ಚಿಕ್ಕಬಳ್ಳಾಪುರ ತಾಲೂಕಿನ ಆವುಲಹಳ್ಳಿಯ ನಿವಾಸಿ ವೆಂಕಟಲಕ್ಷ್ಮಮ್ಮ ಮತ್ತು ಗಂಗಾಧರ್ ಎಂಬುವರಿಗೆ ಸೇರಿದ ಈ ಮನೆಯ ಮೇಲೆ 2023ರಲ್ಲಿ 6.5 ಲಕ್ಷ ಸಾಲ ಮಾಡಿಲಾಗಿತ್ತಂತೆ. ನಂತರ ಸುಮಾರು ಎರಡು ಲಕ್ಷ ರುಪಾಯಿ ಮರುಪಾವತಿ ಮಾಡಲಾಗಿದೆ ಎಂದು ಮನೆ ಮಾಲೀಕ ಗಂಗಾಧರ್ ಹೇಳಿದ್ದಾರೆ. ಉಳಿದ ಸಾಲ ಮರುಪಾವತಿ ಮಾಡಲು ಬರ, ಅನಾರೋಗ್ಯ ಸೇರಿದಂತೆ ಇತರೆ ಸಮಸ್ಯೆಗಳ ಕಾರಣ ಆಗಿಲ್ಲ. ಯಾವುದೇ ಮುಂಗಡ ನೋಟಿಸ್ ನೀಡದ ಫೈನಾನ್ಸ್ ಕಂಪನಿ, ಇಂದು ಬೆಳಗ್ಗೆ ಪೊಲೀಸರೊಂದಿಗೆ ಏಕಾಏಕಿ ಬಂದು ಮನೆಯನ್ನು ಸೀಜ್ ಮಾಡಿ, ತಮ್ಮನ್ನು ಬೀದಿಗೆ ತಳ್ಳಿದ್ದಾರೆ ಎಂದು ಗಂಗಾಧರ್ ಅಳಲು ತೋಡಿಕೊಂಡಿದ್ದಾರೆ.

ಮುಂಚೆ ನೋಟಿಸ್ ನೀಡದೆ ಒಂದೇ ಬಾರಿ ಮೂರು ನೋಟಿಸ್ ನೀಡಿ, ಮನೆ ಸೀಜ್ ಮಾಡಿದ್ದಾರೆ, ಕಾಲಾವಕಾಶ ನೀಡುವಂತೆ ಬೇಡಿಕೊಂಡರೂ ಕನಿಕರ ತೋರಲಿಲ್ಲ. ಹಾಗಾಗಿ ನಮ್ಮ ಮನೆ ನಮಗೆ ಬಿಡಿಸಿಕೊಡುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗೆ ಮನವಿ ನೀಡಲಾಗಿದೆ. ಕಾಲಾವಕಾಶ ನೀಡಿದರೆ ಸಾಲ ಮರುಪಾವತಿ ಮಾಡಲಾಗುವುದು, ಅಲ್ಲಿಯವರೆಗೆ ಮನೆಯಲ್ಲಿರಲು ಅವಕಾಶ ಕಲ್ಪಿಸುವಂತೆ ಮನೆ ಮಾಲೀಕ ಗಂಗಾಧರ್ ಮನವಿ ಮಾಡಿದ್ದಾರೆ.

## ಅಂಚೆ ಕಚೇರಿ ಆಧಾರ್ ಕೇಂದ್ರಗಳಲ್ಲಿ ಕೆಲಸದ ಸಮಯ ವಿಸ್ತರಣೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ರೇಷನ್ ಕಾರ್ಡ್ ಗಳ ಇ–ಕೆವೈಸಿ ಅಪ್ ಡೇಟ್ ಅಭಿಯಾನ ಮತ್ತು ಗೃಹಲಕ್ಷ್ಮಿ ಯೋಜನೆ ಅನುಷ್ಠಾನ ಅನುಕೂಲಕ್ಕಾಗಿ ಅಂಚೆ ಕಚೇರಿಗಳ ಆಧಾರ್ ಕೇಂದ್ರಗಳಲ್ಲಿ ಸಾರ್ವಜನಿಕರ ಆಗಮನ ಗಣನೀಯವಾಗಿ ಹೆಚ್ಚಾಗಿದೆ ಮತ್ತು ಕರ್ನಾಟಕದಾದ್ಯಂತ ಆಧಾರ್ ಸಂಬಂಧಿತ ಸೇವೆಗಳಿಗೆ ಸಾರ್ವಜನಿಕರು ಎದುರಿಸುತ್ತಿರುವ ಉದ್ದನೆಯ ಸರದಿ ಸಾಲುಗಳು, ತಾಂತ್ರಿಕ ಸಮಸ್ಯೆಗಳು ಮತ್ತು ಪದೇ ಪದೇ ಅಲೆದಾಡುವ ತೊಂದರೆಗಳ ಬಗ್ಗೆ ವಿವಿಧ ಮಾಧ್ಯಮಗಳು ವರದಿಗಳನ್ನು ಮಾಡಿವೆ. ಸಾರ್ವಜನಿಕರ ಪ್ರಸ್ತುತದ ಸಂಕಷ್ಟಗಳು ಮತ್ತು ಆಧಾರ್ ಸೇವೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಹಾಗೂ ಹೆಚ್ಚಿನ ಜನಸಂದಣಿಯನ್ನು ನಿರ್ವಹಿಸಲು ಅಕ್ಟೋಬರ್ 20 ರವರೆಗೆ ಆಧಾರ್ ಕೇಂದ್ರಗಳ ಕೆಲಸದ ಸಮಯವನ್ನು ಬೆಳಗ್ಗೆ ಒಂದು ಗಂಟೆ ಮುಂಚಿತವಾಗಿ ಮತ್ತು ಸಂಜೆ ಒಂದು ಗಂಟೆ ತಡವಾಗಿ ಒಟ್ಟು ಎರಡು ಗಂಟೆ ವಿಸ್ತರಿಸಲು ತಿರ್ಮಾನಿಸಲಾಗಿದೆ. ಆದ್ದರಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋಲಾರ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ಬಸ್ ಯೋಜನೆಗೆ ಡೀಸೆಲ್ ಕೊರತೆ

## ಯುವ ಸಂಸತ್‌ನಲ್ಲಿ ಪ್ರತಿಪಕ್ಷದ ಪ್ರಶ್ನೆಗಳ ಸುರಿಮಳೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಂದ ಯುವ ಸಂಸತ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಗರದ ಸರ್ಕಾರಿ ಮಹಿಳಾ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಸರ್ಕಾರಿ ಬಾಲಕರ ಪಿಯು ಕಾಲೇಜು ಹಾಗೂ ಸರ್ಕಾರಿ ಬಾಲಕಿಯರ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಣಕು ಸಂಸತ್ ಸೃಷ್ಟಿಯಾಗಿತ್ತು. ವಿದ್ಯಾರ್ಥಿಗಳನ್ನು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನಾಗಿ ಆರಿಸಲಾಗಿತ್ತು.

ಯುವ ವಿದ್ಯಾರ್ಥಿಗಳು ಥೇಟ್ ಸಂಸತ್ ಸದಸ್ಯರಂತೆ ಪ್ರಶ್ನೆ ಕೇಳುವುದು ಮತ್ತು ಉತ್ತರಿಸುವುದು ಭಾಗವಹಿಸಿದ್ದವರ ಹುಬ್ಬೇರಿಸಿತು. ಎತ್ತಿನಹೊಳೆ ನೀರು ಹರಿಸುವುದು, ಕೆಸಿಎನ್ ಮತ್ತು ಎಚ್.ಎನ್ ವ್ಯಾಲಿಗಳ ನೀರು ಶುದ್ಧೀಕರಿಸುವುದು, ಸಾರಿಗೆ ಸಂಸ್ಥೆಯ ಬಸ್ ಗಳಿಗೆ ಡೀಸೆಲ್ ಮತ್ತಿತರ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ವಿರೋಧ ಪಕ್ಷಗಳ ಸದಸ್ಯರು ಆಡಳಿತ ಪಕ್ಷದ ಸರ್ಕಾರದ ವಿರುದ್ಧ ಮುಗಿಬಿದ್ದರು.

ಕಳೆದ ಚುನಾವಣಾ ಸಂದರ್ಭದಲ್ಲಿ ಜನರ ಕಣ್ಣಿಗೆ ಮಂಕುಬೂದಿ ಎರಚುವ ಹಿನ್ನಲೆಯಲ್ಲಿ ಮುಂದಿನ ವರ್ಷದಲ್ಲಿ ಎತ್ತಿನಹೊಳೆ ನೀರು



ಹರಿಸುವುದಾಗಿ ವಾಗ್ದಾನ ಮಾಡಿದ್ದರು. 5 ವರ್ಷ ಮುಕ್ತಾಯವಾದರೂ ನೀರು ಹರಿಯಲಿಲ್ಲ. ಯೋಜನಾ ವೆಚ್ಚ ಒಂದಕ್ಕೆ ಮೂರು ಪಟ್ಟು ಹೆಚ್ಚಾಗಿದೆ. ಕೇವಲ ಹಣ ಲೂಟಿ ಹೊಡೆಯುವುದಕ್ಕಾಗಿಯೇ ಯೋಜನೆ ರೂಪಿಸಲಾಗಿದೆ ಎಂದು ಟೀಕಿಸಿದರು.

ನೀರಾವರಿ ಸಚಿವರು ಉತ್ತರಿಸಿ ಎತ್ತಿನಹೊಳೆ ನೀರು ತುಮಕೂರು ಜಿಲ್ಲೆ ವರೆಗೂ ಹರಿಯುತ್ತಿದೆ. ಈಗಾಗಲೇ ಪೈಪ್ ಲೈನ್ ಅಳವಡಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಮುಂದಿನ ವರ್ಷ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೂ ಹರಿಸಲಾಗುವುದು. ಎಂದು ಭರವಸೆ ನೀಡಿದರು.

ಬೆಂಗಳೂರಿನ ಕೊಳಚೆ ನೀರನ್ನು ಮೂರನೇ ಹಂತದಲ್ಲಿ ಶುದ್ಧೀಕರಿಸದೆ ಕೆರೆಗಳಿಗೆ ಹರಿಸುತ್ತಿರುವುದು ಜನರಿಗೆ ಮತ್ತು ಜಾನುವಾರುಗಳಿಗೆ ಮಾರಕವಾಗಿದೆ. ಕುಡಿಯಲು ನೀರು ಕೇಳಿದರೆ ಕೊಳಚೆ ನೀರು ಹರಿಸಲಾಗುತ್ತಿದೆ. ಕೆರೆಗಳು ಹಾಗೂ ಸುತ್ತಮುತ್ತಲಿನ ಪರಿಸರ ಹಾಳಾಗುತ್ತಿದೆ. ಕೆರೆಗಳಲ್ಲಿನ ಜೀವ ಜಂತುಗಳು ಸಾಯುತ್ತಿವೆ. ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ನೀರನ್ನು ಮೂರನೇ ಹಂತದಲ್ಲಿ ಶುದ್ಧೀಕರಿಸಲು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ನೀರು ಕೇವಲ ಅಂತರ್ಜಲ ವೃದ್ಧಿಗಾಗಿ ಮಾತ್ರ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಕೆರೆಗಳ ನೀರನ್ನು ಕುಡಿಯಲು ಅಥವಾ ಕೃಷಿಗೆ ಬಳಸುತ್ತಿಲ್ಲ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ಪಾತಾಳಕ್ಕೆ ಕುಸಿದಿದ್ದ ಅಂತರ್ಜಲ ಇತ್ತೀಚೆಗೆ ಬಹಳಷ್ಟು ವೃದ್ಧಿಯಾಗಿದೆ. ಬತ್ತಿ ಹೋಗಿದ್ದ ಕೊಳವೆಬಾವಿಗಳಲ್ಲಿ ಮತ್ತೆ ನೀರು ಬರುತ್ತಿದೆ. ಸಾಧ್ಯವಾದರೆ ಮೂರನೇ ಹಂತದ ಶುದ್ಧೀಕರಣದ ಕುರಿತು ಚಿಂತನೆ ನಡೆಸಲಾಗುವುದು ಎಂದು ಉಸ್ತುವಾರಿ ಸಚಿವರು ಭರವಸೆ ನೀಡಿದರು.

ಶಕ್ತಿಯೋಜನೆಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಘೋಷಣೆ ಮಾಡಲಾಯಿತು. ಯಾವುದೇ ಮುಂದಾಲೋಚನೆ ಅಥವಾ ಚಿಂತನೆ ಮಾಡದೆ ಉಚಿತ ಬಸ್ ಪ್ರಯಾಣ ರೂಪಿಸಿದ್ದರಿಂದ ಸಾರಿಗೆ ಸಂಸ್ಥೆ ದಿವಾಳಿಯಾಗಿದೆ. ಡೀಸೆಲ್‌ಗೆ ಹಣವಿಲ್ಲದೆ ನೂರಾರು ಬಸ್ ಗಳು ಡಿಪೋಗಳಲ್ಲಿ ನಿಂತಿವೆ. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಲು ತೊಂದರೆಯಾಗಿದೆ ವಿರೋಧಪಕ್ಷದವರು ಒಟ್ಟಿಗೆ ಮುಗಿಬಿದ್ದರು.

ಸಾರಿಗೆ ಸಚಿವರು ಉತ್ತರಿಸಿ ನಾಲ್ಕು ನಿಗಮಗಳಿಗೆ 20 ಕೋಟಿ ಬಿಡುಗಡೆ ಮಾಡಲಾಗಿದೆ. ಡೀಸೆಲ್ ಕೊರತೆ ಸಮಸ್ಯೆ ನಿವಾರಣೆಯಾಗಿದೆ ಎಂದು ಉತ್ತರಿಸಿದರು. ಅನೇಕ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತಹಸೀಲ್ದಾರ್ ಸುದರ್ಶನ ಯಾದವ್ ತಾ.ಪಂ ಇಒ ಎಸ್.ಆನಂದ್, ಸಮಾಜ ಕಲ್ಯಾಣ ಇಲಾಖೆ ಸಹಾಯಕನಿರ್ದೇಶಕ ಶ್ರೀನಿವಾಸನಾಯಕ್ ಇದ್ದರು.

# ಅನಾರೋಗ್ಯಕ್ಕೆ ಆಂತರಿಕ ಅಶುದ್ಧತೆಯೂ ಪ್ರಮುಖ ಕಾರಣ

## ಸತ್ಯ ಸಾಯಿ ಗ್ರಾಮದಲ್ಲಿ ನಡೆದ ನವರಾತ್ರಿ ಸಂಭ್ರಮದಲ್ಲಿ ಸದ್ಗುರು ಶ್ರೀಮಧುಸೂದನ ಸಾಯಿ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ದುರಾಸೆ, ಋಣಾತ್ಮಕ ಆಲೋಚನೆಗಳು ಮತ್ತು ಆಂತರಿಕ ಅಶಾಂತಿ ಮನುಷ್ಯನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಮನಸ್ಸು ಮತ್ತು ಹೃದಯವನ್ನು ಶುದ್ಧವಾಗಿಟ್ಟುಕೊಂಡು, ಸಕಾರಾತ್ಮಕ ಚಿಂತನೆಗಳಿಗೆ ಆದ್ಯತೆ ನೀಡುವ ಮೂಲಕ ಉತ್ತಮ ಆರೋಗ್ಯ ಹಾಗೂ ನೆಮ್ಮದಿಯ ಜೀವನವನ್ನು ರೂಪಿಸಿಕೊಳ್ಳಬಹುದು ಎಂದು ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯ ಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದ ನಾಲ್ಕನೇ ದಿನ ಆಯೋಜಿಸಿದ್ದ ವಿಷ್ಣು ಸಹಸ್ರನಾಮ ಯಾಗ ಮತ್ತು ಧನ್ವಂತರಿ ಹೋಮದ ಪೂರ್ಣಾಹುತಿ ಬಳಿಕ ಅವರು ಆಶೀರ್ವಚನ ನೀಡಿದರು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಸಾಧನೆಗೆ ಆರೋಗ್ಯ ಅತ್ಯಗತ್ಯ. ಆದರೆ ಇಂದು ಆರೋಗ್ಯವೇ ಜಗತ್ತಿನ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಚಿಕ್ಕ ವಯಸ್ಸಿನಲ್ಲೇ ಗಂಭೀರ ಅನಾರೋಗ್ಯಕ್ಕೆ ತುತ್ತಾಗಿ ಜೀವ ಕಳೆದುಕೊಳ್ಳುತ್ತಿರುವ ಘಟನೆಗಳು ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿ. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಮತ್ತು ಆಂತರಿಕ ಶುದ್ಧತೆಗೂ ಮಹತ್ವ ನೀಡಬೇಕು. ಮನಸ್ಸಿನಲ್ಲಿ ದೈವಿಕ ಚಿಂತನೆಗಳಿಗೆ ಅವಕಾಶ ನೀಡಿದಾಗ ಋಣಾತ್ಮಕ ಆಲೋಚನೆಗಳಿಂದ ದೂರವಿರಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಮನುಷ್ಯನ ಹೃದಯವು ದೇವಸ್ಥಾನದಂತೆ



ಪವಿತ್ರವಾಗಿರಬೇಕು. ಉತ್ತಮ ಆಲೋಚನೆಗಳು ಮತ್ತು ದೈವಿಕ ಸ್ಮರಣೆಯಿಂದ ಮನಸ್ಸನ್ನು ತುಂಬಿಕೊಳ್ಳಬೇಕು. ಋಣಾತ್ಮಕ ಚಿಂತನೆಗಳು ಆಂತರಿಕ ಶಕ್ತಿಯನ್ನು ಕುಗ್ಗಿಸುತ್ತವೆ. ಹಿಂದಿನ ತಲೆಮಾರಿನವರ ಜೀವನಶೈಲಿ, ಸಂಯಮ ಮತ್ತು ಶಿಸ್ತಿನಿಂದ ಕೂಡಿದ ಬದುಕು ಅವರ ದೀರ್ಘಾಯುಷ್ಯಕ್ಕೆ ಪೂರಕವಾಗಿತ್ತು ಎಂದು ಹೇಳಿದರು. ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆಗಳಿವೆ, ಆದರೆ ದುರಾಸೆಗೆ ಮದ್ದಿಲ್ಲ ಎಂದು ಪ್ರತಿಪಾದಿಸಿದ ಸದ್ಗುರು ಶ್ರೀ ಮಧುಸೂದನ ಸಾಯಿ, ದುರಾಸೆಯೇ ಮನುಷ್ಯನ ಒತ್ತಡ ಮತ್ತು ಅಶಾಂತಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದರು. ಅತಿಯಾದ ಆಸೆಗಳಿಂದಾಗಿ ಉತ್ತಮ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರ ಪರಿಣಾಮವಾಗಿ ಆರೋಗ್ಯ ಸಮಸ್ಯೆಗಳು ಚಿಕ್ಕ ವಯಸ್ಸಿನಲ್ಲೇ ಕಾಣಿಸಿಕೊಳ್ಳುತ್ತಿವೆ. ಭಗವಂತನನ್ನು ಹೃದಯಾಂತರಾಳದಲ್ಲಿ ಸದಾ ಸ್ಮರಿಸುತ್ತಿದ್ದರೆ ದುರಾಸೆ ಮತ್ತು ಋಣಾತ್ಮಕ ಚಿಂತನೆಗಳಿಗೆ ಅವಕಾಶ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಶೃಂಗೇರಿಯ ಋತ್ವಿಜರಾದ ವಿದ್ವಾನ್ ನಾಗಭೂಷಣ ಭಟ್ ಮಾತನಾಡಿ, ಶಿಕ್ಷಣ ಮತ್ತು ವೈದ್ಯಕೀಯ ಚಿಕಿತ್ಸೆಯನ್ನು ವ್ಯಾಪಾರದ ವಸ್ತುವಾಗಿಸಬಾರದು ಎಂಬ ಚಾಣಕ್ಯರ ಆಶಯವನ್ನು ಸತ್ಯ ಸಾಯಿ ಗ್ರಾಮ ಅಕ್ಷರಶಃ ಪಾಲಿಸುತ್ತಿದೆ. ಉಚಿತ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಮೂಲಕ ಈ ಸಂಸ್ಥೆ ವಿಶಿಷ್ಟ ಮಾದರಿಯನ್ನು ರೂಪಿಸಿದೆ ಎಂದು ಶ್ಲಾಘಿಸಿದರು.

ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮಾತನಾಡಿ, ವಿದ್ಯಾರ್ಥಿಗಳು ಪೂರ್ವಜನ್ಮದ ಪುಣ್ಯದ ಫಲವಾಗಿ ಈ ಸಂಸ್ಥೆಯಲ್ಲಿ ಪ್ರವೇಶ ಪಡೆಯುವ ಅವಕಾಶ ಗಳಿಸಿದ್ದಾರೆ. ಇಲ್ಲಿ ಉಚಿತ ಶಿಕ್ಷಣದ ಜೊತೆಗೆ ಜಾಗತಿಕ ಗುಣಮಟ್ಟದ ಸೇವೆಗಳೂ ಲಭ್ಯವಿವೆ. ಸಂಸ್ಥೆಯಲ್ಲಿ ಆಯೋಜಿಸುವ ಪ್ರತಿಯೊಂದು ಕಾರ್ಯಕ್ರಮವೂ ಉನ್ನತ ಗುಣಮಟ್ಟದಿಂದ ಕೂಡಿರುತ್ತದೆ ಎಂದರು.

ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಎನ್. ನರಸಿಂಹಮೂರ್ತಿ, ಬಾಗೇಪಲ್ಲಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಉಪಸ್ಥಿತರಿದ್ದರು.

# ಬೆಂಗಳೂರು ಹೆಬ್ಬಾಳ ಸುರಂಗ ರಸ್ತೆಗೆ ಹಣಕಾಸು ಇಲಾಖೆ Red ಸಿಗ್ನಲ್: ಯೋಜನೆ ಸದ್ಯಕ್ಕೆ ಬೇಡ ಎಂದ ಇಲಾಖೆ..!

ಬೆಂಗಳೂರು: ರಾಜಧಾನಿ ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ನೀಡಲು ರಾಜ್ಯ ಸರ್ಕಾರ ಮುಂದಿಟ್ಟಿದ್ದ ಮಹತ್ವಾಕಾಂಕ್ಷಿ ಹೆಬ್ಬಾಳ ಕಿರು ಸುರಂಗ ರಸ್ತೆ (Hebbal Short Tunnel Road) ಯೋಜನೆಗೆ ಈಗ ರಾಜ್ಯ ಹಣಕಾಸು ಇಲಾಖೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಎಸ್ಟೀಮ್ ಮಾಲ್‌ನಿಂದ ಪಶುವೈದ್ಯಕೀಯ ಕಾಲೇಜಿನವರೆಗೆ ನಿರ್ಮಿಸಲು ಉದ್ದೇಶಿಸಿರುವ 2.2 ಕಿ.ಮೀ ಉದ್ದದ ಹೆಬ್ಬಾಳ ಅಲ್ಪ ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಇಲಾಖೆ ಹಲವು ಆರ್ಥಿಕ, ಗುತ್ತಿಗೆ ಮತ್ತು ಸಂಚಾರ ಯೋಜನೆಗಳ ಕುರಿತ ಆತಂಕಗಳನ್ನು ವ್ಯಕ್ತಪಡಿಸಿದ್ದು, ಸಮಗ್ರ ಸಂಚಾರ ಯೋಜನೆಯ ಆಧಾರದ ಮೇಲೆ ಹೊಸ ಪ್ರಸ್ತಾವನೆ ಸಲ್ಲಿಸುವವರೆಗೆ ಯೋಜನೆಯನ್ನು ಮುಂದೂಡುವಂತೆ ಇಲಾಖೆ ಶಿಫಾರಸು ಮಾಡಿದೆ.

ಲಭ್ಯವಾದ ದಾಖಲೆಯ ಪ್ರಕಾರ, 2025ರಲ್ಲಿ ಪರಿಷ್ಕೃತ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಪರಿಶೀಲಿಸಿದ ಬಳಿಕ ಹಣಕಾಸು ಇಲಾಖೆ ಹಲವು ಆಕ್ಷೇಪಗಳನ್ನು ಎತ್ತಿತ್ತು. ಆದರೆ, ಈ ಆತಂಕಗಳನ್ನು ಪರಿಗಣಿಸದೆಯೇ ಸಚಿವ ಸಂಪುಟ ಯೋಜನೆಗೆ ಮುಂದುವರಿದಿದ್ದು, 2025ರ ಡಿಸೆಂಬರ್ 8ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (BDA) ಯೋಜನೆಯ ಅನುಷ್ಠಾನ ಸಂಸ್ಥೆಯನ್ನಾಗಿ ನೇಮಿಸಿ ಸರ್ಕಾರದ ಆದೇಶ ಹೊರಡಿಸಿತ್ತು.

ಹಿಂದೆ ವ್ಯಕ್ತಪಡಿಸಿದ್ದ ಆಕ್ಷೇಪಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಸ್ತಾವನೆಯಲ್ಲಿ ಪ್ರಯತ್ನಿಸಲಾಗಿದೆ ಎಂದು ಹಣಕಾಸು ಇಲಾಖೆ ಗಮನಿಸಿದ್ದರೂ, ಈ ಸುರಂಗ ರಸ್ತೆಯನ್ನು ಪ್ರಸ್ತಾವಿತ ಉತ್ತರ-ದಕ್ಷಿಣ ಸುರಂಗ ಮಾರ್ಗದೊಂದಿಗೆ ಹೇಗೆ ಸಂಯೋಜಿಸಲಾಗುತ್ತದೆ. ಬಿಡಿಎ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳಲಿದೆ ಹಾಗೂ ಪರ್ಯಾಯ ಸಂಚಾರ ವ್ಯವಸ್ಥೆಗಳ ಸ್ವತಂತ್ರ ಮೌಲ್ಯಮಾಪನ ಏಕೆ ನಡೆದಿಲ್ಲ ಎಂಬ ಪ್ರಶ್ನೆಗಳನ್ನು ಎತ್ತಿದೆ.

ಉತ್ತರ-ದಕ್ಷಿಣ ಸುರಂಗ ಮಾರ್ಗಕ್ಕಾಗಿ ಬಿ-ಸ್ಮೈಲ್ (B-SMILE) ಸಂಸ್ಥೆ ನಡೆಸುತ್ತಿರುವ ಟೆಂಡರ್‌ನಲ್ಲಿ ಬದಲಾವಣೆ ಮಾಡುವ ಪ್ರಸ್ತಾವನೆ ಹಣಕಾಸು ಇಲಾಖೆಯ ಪ್ರಮುಖ ಆಕ್ಷೇಪಗಳಲ್ಲಿ ಒಂದಾಗಿತ್ತು.



ಅಲ್ಪ ಸುರಂಗ ರಸ್ತೆಗೆ ಅವಕಾಶ ಕಲ್ಪಿಸಲು ಮೆಖ್ರಿ ವೃತ್ತದಲ್ಲಿನ ಪ್ರಮುಖ ರ?ಯಾಂಪ್‌ಗಳ ವಿನ್ಯಾಸ ಬದಲಿಸುವುದು ಅಥವಾ ಅವುಗಳನ್ನು ಕೈಬಿಡುವುದು ಸೇರಿದಂತೆ ಈಗಿರುವ ಟೆಂಡರ್‌ಗೆ ಪೂರಕ ತಿದ್ದುಪಡಿ ತರಲು ಉದ್ದೇಶಿಸಲಾಗಿತ್ತು.

ಟೆಂಡರ್ ಪ್ರಕಟಿಸಿದ ಬಳಿಕ ಅದರ ವ್ಯಾಪ್ತಿಯಲ್ಲಿ ಬದಲಾವಣೆ ಮಾಡಿದರೆ ಯೋಜನೆಯು ಕಾನೂನು ಸವಾಲುಗಳನ್ನು ಎದುರಿಸಬಹುದು, ಪರಿಹಾರ ಮೊತ್ತದ ಬೇಡಿಕೆಗಳು ಎದುರಾಗಬಹುದು ಹಾಗೂ ಮೂಲ ಯೋಜನೆಯ ವಿನ್ಯಾಸವನ್ನು ಆಧರಿಸಿ ಬಿಡ್ ಸಲ್ಲಿಸಿದ್ದ ಅಂತರರಾಷ್ಟ್ರೀಯ ಗುತ್ತಿಗೆದಾರರ ಭಾಗವಹಿಸುವಿಕೆ ಕಡಿಮೆಯಾಗಬಹುದು ಎಂದು ಇಲಾಖೆ ಎಚ್ಚರಿಸಿತ್ತು.

ಉತ್ತರ-ದಕ್ಷಿಣ ಸುರಂಗ ಮಾರ್ಗದ ಪರಿಷ್ಕೃತ ಉಪಯುಕ್ತತೆ ಮತ್ತು ಆರ್ಥಿಕ ಮಾದರಿಯನ್ನು ಸಮಗ್ರವಾಗಿ ಮರುಪರಿಶೀಲಿಸದೆ, ಕೇವಲ ಕಾರ್ಯವಿಧಾನದ ತಿದ್ದುಪಡಿಯ ಮೂಲಕ ಬದಲಾವಣೆಗಳನ್ನು ಸಮರ್ಥಿಸಿರುವುದನ್ನೂ ಇಲಾಖೆ ಪ್ರಶ್ನಿಸಿತ್ತು.

2,215 ಕೋಟಿ ರೂ. ವೆಚ್ಚಕ್ಕೆ ಃಆಂ ಆಂತರಿಕ ಸಂಪನ್ಮೂಲ ಬಳಕೆ

2,215 ಕೋಟಿ ರೂ. ವೆಚ್ಚದ ಯೋಜನೆಗೆ ಸಂಪೂರ್ಣವಾಗಿ ಬಿಡಿಎಯ ಆಂತರಿಕ ಸಂಪನ್ಮೂಲಗಳಿಂದ ಹಣ ಹೊಂದಿಸುವ ನಿರ್ಧಾರದ ಬಗ್ಗೆಯೂ ಹಣಕಾಸು ಇಲಾಖೆ ಕಳವಳ ವ್ಯಕ್ತಪಡಿಸಿತ್ತು.

2026ರ ಮಾರ್ಚ್ ವೇಳೆಗೆ ಆಸ್ತಿ ನಗದೀಕರಣದ ಮೂಲಕ 10,000 ಕೋಟಿ ರೂ. ಆದಾಯ ಸಂಗ್ರಹಿಸುವ ನಿರೀಕ್ಷೆಯನ್ನು ಈ ಪ್ರಸ್ತಾವನೆ ಆಧರಿಸಿತ್ತು. ಇದರಲ್ಲಿ ಇ-ಹರಾಜು ಹಾಗೂ ಡಾ. ಕೆ. ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದ ಠೇವಣಿಗಳೂ ಸೇರಿವೆ ಎಂದು ವರದಿಯಾಗಿದೆ.

ಆದರೆ, ಮಾರುಕಟ್ಟೆಯ ಏರಿಳಿತಗಳು ಹಾಗೂ ಕಾನೂನು ಅಥವಾ ನಿಯಂತ್ರಣಾತ್ಮಕ ವಿಳಂಬಗಳಿಂದ ಈ ಆದಾಯದ ನಿರೀಕ್ಷೆಗಳಿಗೆ ಧಕ್ಕೆಯಾಗಬಹುದು ಎಂದು ಇಲಾಖೆ ಎಚ್ಚರಿಸಿತ್ತು.

ನಿರೀಕ್ಷಿತ ಒಂದು ಬಾರಿಯ ಆದಾಯದ ಶೇಕಡಾ 20ಕ್ಕಿಂತ ಹೆಚ್ಚಿನ ಮೊತ್ತವನ್ನು ಸುರಂಗ ರಸ್ತೆ ಯೋಜನೆಗೆ ಬಳಸುವುದರಿಂದ ಬಿಡಿಎಯ ಮೂಲ ಜವಾಬ್ದಾರಿಗಳ ಮೇಲೆ ಪರಿಣಾಮ ಬೀರಬಹುದು ಎಂದೂ ತಿಳಿಸಿತ್ತು.

ಬಡಾವಣೆಗಳ ಅಭಿವೃದ್ಧಿ, ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ ಮತ್ತು ಉದ್ಯಾನವನಗಳಂತಹ ಮೂಲಸೌಕರ್ಯಗಳನ್ನು ಕಲ್ಪಿಸುವ ಕಾರ್ಯಗಳಿಗೆ ಹಣಕಾಸಿನ ಕೊರತೆ ಉಂಟಾಗುವ ಸಾಧ್ಯತೆಯಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿತ್ತು.

ಸಮಗ್ರ ಸಂಚಾರ ಯೋಜನೆ ಇಲ್ಲವೆಂಬ ಆಕ್ಷೇಪ

ಸಂಚಾರ ಯೋಜನೆಗೆ ಸಂಬಂಧಿಸಿದಂತೆ ಸಮಗ್ರ ಕಾರ್ಯಸಾಧ್ಯತಾ ವರದಿ ಅಥವಾ ಹೆಸರಾಂತ ತಜ್ಞರಿಂದ ಸಿದ್ಧಪಡಿಸಲಾದ ಸ್ವತಂತ್ರ ವಿವರವಾದ ಯೋಜನಾ ವರದಿ (DPR) ಇಲ್ಲದಿರುವುದನ್ನೂ ಹಣಕಾಸು ಇಲಾಖೆ ಪ್ರಶ್ನಿಸಿತ್ತು. ಉತ್ತರ-ದಕ್ಷಿಣ ಸುರಂಗ ಮಾರ್ಗವನ್ನು ಅನುಷ್ಠಾನಗೊಳಿಸುತ್ತಿರುವ ಬಿ-ಸ್ಮೈಲ್ ಸಂಸ್ಥೆಯೇ ಸಿದ್ಧಪಡಿಸಿದ ಡಿಪಿಆರ್ ಅನ್ನು ಅವಲಂಬಿಸಿರುವುದರ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿತ್ತು.

ಈ ಪ್ರಸ್ತಾವನೆಯು ಮುಖ್ಯವಾಗಿ ಖಾಸಗಿ ವಾಹನಗಳ ಸಂಚಾರಕ್ಕೆ ಆದ್ಯತೆ ನೀಡಿದ್ದು, ಮೆಟ್ರೋ ಎರಡನೇ ಹಂತದ ಬಿ (ವಿಮಾನ ನಿಲ್ದಾಣ ಮಾರ್ಗ), ಉಪನಗರ ರೈಲು ಅಥವಾ ಇತರ ಹೆಚ್ಚಿನ ಪ್ರಯಾಣಿಕರನ್ನು ಸಾಗಿಸುವ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳೊಂದಿಗೆ ಯೋಜನೆಯನ್ನು ಹೇಗೆ ಸಂಯೋಜಿಸಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ ಎಂದು ಇಲಾಖೆ ಹೇಳಿತ್ತು.

ಹೀಗಾಗಿ, ಸಮಗ್ರ ಸಂಚಾರ ಯೋಜನೆಯ ಆಧಾರದ ಮೇಲೆ ಪರಿಷ್ಕೃತ ಪ್ರಸ್ತಾವನೆ ಸಿದ್ಧಪಡಿಸುವ ಅಗತ್ಯವನ್ನು ಹಣಕಾಸು ಇಲಾಖೆ ಒತ್ತಿ ಹೇಳಿತ್ತು.

# ಕಾಂಗ್ರೆಸ್ ಎಂಎಲ್‌ಸಿ ಅಭ್ಯರ್ಥಿ ಪುಟ್ಟಣ್ಣ ಪರ ಶಿಕ್ಷಣ ಇಲಾಖೆ ಅಧಿಕಾರಿಗಳಿಂದ ಪ್ರಚಾರ: ಎನ್‌ಡಿಎ ಆರೋಪ



ಬೆಂಗಳೂರು: ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಂಎಲ್‌ಸಿ ಅಭ್ಯರ್ಥಿ ಪುಟ್ಟಣ್ಣ ಪರ ಪ್ರಚಾರ ನಡೆಸಲು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ಅಧಿಕೃತ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (NDA) ಸದಸ್ಯರು ಮುಖ್ಯ ಚುನಾವಣಾಧಿಕಾರಿ (CEO) ಅವರಿಗೆ ದೂರು ನೀಡಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಅವರೊಂದಿಗೆ ಸಲ್ಲಿಸಿದ ಪತ್ರದಲ್ಲಿ, ವಿಶೇಷವಾಗಿ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಶಿಕ್ಷಕರು, ಸಿಬ್ಬಂದಿ ಹಾಗೂ ಆಡಳಿತ ಮಂಡಳಿಗಳ ಮೇಲೆ ಪುಟ್ಟಣ್ಣ ಅವರನ್ನು ಬೆಂಬಲಿಸುವಂತೆ ಮತ್ತು ಅವರಿಗೆ ಮತ ಹಾಕುವಂತೆ ಒತ್ತಡ ಹೇರಲಾಗುತ್ತಿದೆ ಎಂದು ಮೈತ್ರಿಕೂಟದ ನಾಯಕರು ಆರೋಪಿಸಿದ್ದಾರೆ.

ಡಿಡಿಪಿಐಗಳು, ಡಿಡಿಪಿಯುಗಳು ಮತ್ತು ಬಿಇಒಗಳು ನಿರ್ದಿಷ್ಟ ಅಭ್ಯರ್ಥಿಯ ಪರವಾಗಿ ಮತಯಾಚನೆ ಮಾಡುತ್ತಿರುವುದು ಅಧಿಕೃತ ಅಧಿಕಾರದ ದುರುಪಯೋಗವಾಗುತ್ತದೆ. ಇದನ್ನು ಸಾಮಾನ್ಯ ರಾಜಕೀಯ ಪ್ರಚಾರವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಎನ್‌ಡಿಎ ಹೇಳಿದೆ.

ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳು ಮತ್ತು ಕ್ಷೇತ್ರಮಟ್ಟದ ಸಿಬ್ಬಂದಿ ರಾಜಕೀಯ ತಟಸ್ಥತೆಯನ್ನು ಕಾಯ್ದುಕೊಳ್ಳುವಂತೆ ಹಾಗೂ ಚುನಾವಣಾ ಪ್ರಚಾರದಲ್ಲಿ ತೊಡಗದಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಬೇಕು ಎಂದು ಮೈತ್ರಿಕೂಟವು ಸಿಇಒ ಅವರನ್ನು ಒತ್ತಾಯಿಸಿದೆ. ಮತದಾರರ ಮೇಲೆ ಪ್ರಭಾವ ಬೀರುವುದು ಅಥವಾ ಒತ್ತಡ ಹೇರುವುದು ಹಾಗೂ ಚುನಾವಣಾ ಪ್ರಚಾರಕ್ಕಾಗಿ ಅಧಿಕೃತ ಸಭೆಗಳು, ವಾಟ್ಸ್‌ಆ?ಯಪ್ ಗುಂಪುಗಳು, ವಾಹನಗಳು, ಕಚೇರಿಗಳು ಮತ್ತು ಇತರ ಸರ್ಕಾರಿ ಸಂಪನ್ಮೂಲಗಳನ್ನು ಬಳಸುವುದನ್ನು ತಡೆಯಬೇಕು ಎಂದು ಮನವಿ ಮಾಡಿದೆ.

ಮತಯಾಚನೆ, ಬೆದರಿಕೆ ಹಾಗೂ ಅಧಿಕೃತ ಹುದ್ದೆಯ ದುರುಪಯೋಗಕ್ಕೆ ಸಂಬಂಧಿಸಿದ ದೂರುಗಳ ಕುರಿತು ಸ್ವತಂತ್ರ ತನಿಖೆ ನಡೆಸಬೇಕು ಎಂದೂ ಎನ್‌ಡಿಎ ಆಗ್ರಹಿಸಿದೆ.

ಇಂತಹ ದೂರುಗಳನ್ನು ಅದೇ ಇಲಾಖೆಯ ಅಧಿಕಾರಿಗಳ ವ್ಯಾಪ್ತಿಗೆ ವಹಿಸುವ ಬದಲು ಸ್ವತಂತ್ರವಾಗಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಇಂತಹ ಘಟನೆಗಳ ಬಗ್ಗೆ ದೂರು ನೀಡುವ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಗುರುತನ್ನು ಗೌಪ್ಯವಾಗಿಡಬೇಕು ಹಾಗೂ ಅವರಿಗೆ ರಕ್ಷಣೆ ಒದಗಿಸಬೇಕು ಎಂದು ಮೈತ್ರಿಕೂಟವು ಒತ್ತಾಯಿಸಿದೆ. ದೂರು ನೀಡಿದವರ ವಿರುದ್ಧ ಕಿರುಕುಳ, ಅನಗತ್ಯ ತಪಾಸಣೆ, ವರ್ಗಾವಣೆ ಅಥವಾ ಇತರ ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯ ಬಗ್ಗೆಯೂ ಎಚ್ಚರಿಕೆ ನೀಡಿದೆ.

ಸರ್ಕಾರಿ ಅಧಿಕಾರಿಗಳ ಒತ್ತಡ ಅಥವಾ ಪ್ರತಿಕೂಲ ಕ್ರಮಗಳ ಭಯವಿಲ್ಲದೆ ಶಿಕ್ಷಕರು ತಮ್ಮ ಮತದಾನದ ಹಕ್ಕನ್ನು ಸ್ವತಂತ್ರವಾಗಿ ಚಲಾಯಿಸುವಂತಾಗಬೇಕು ಎಂದು ಎನ್‌ಡಿಎ ಹೇಳಿದೆ. ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ಖಚಿತಪಡಿಸಲು ತಕ್ಷಣ ಮಧ್ಯಪ್ರವೇಶಿಸುವಂತೆ ಮನವಿ ಮಾಡಿದೆ.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕೆ.ಜಿ.ಎಫ್ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆಗೆ ಕರೆ



ಕೆ.ಜಿ.ಎಫ್: ಕೆ.ಜಿ.ಎಫ್ ಕಿಂಗ್ ಜಾರ್ಜ್ ಹಾಲ್‌ನಲ್ಲಿ ಆರ್.ಕೆ. ಅರ್ಥಕಟ್ಟಲ್ಯೆ ನೇತೃತ್ವದ ಸಮಾಜ ಸೇವಕರಾದ ವಿ. ಮೋಹನ್ ಕೃಷ್ಣ ಅವರ ನೇತೃತ್ವದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಪದವೀಧರ ಮತದಾರರ ಹಾಗೂ ಯುವಜನರ ಜಾಗೃತಿ ಸಭೆ ನಡೆಯಿತು.

ಈ ಸಭೆಯಲ್ಲಿ ಮಾತನಾಡಿದ ವಿ. ಮೋಹನ್ ಕೃಷ್ಣ, ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸಾಮರ್ಥ್ಯ ಹೊಂದಿರಬೇಕು. ವಿಶೇಷವಾಗಿ ಪದವೀಧರರ ಉದ್ಯೋಗಾವಕಾಶ, ಶಿಕ್ಷಣದ ಗುಣಮಟ್ಟ, ಜನರ ಜೀವನಮಟ್ಟ ಮತ್ತು ಜನನಾಯಕತ್ವದ ಹೊಣೆಗಾರಿಕೆ ಕುರಿತು ಸ್ಪಷ್ಟ ನಿಲುವು ಹೊಂದಿರಬೇಕು ಎಂದು ಹೇಳಿದರು.

ಪ್ರಸ್ತುತ ಚುನಾವಣೆಯಲ್ಲಿ ಅರ್ಹತೆ, ಜನಪರ ಕಾಳಜಿ ಹಾಗೂ ಜವಾಬ್ದಾರಿಯುತ ಕಾರ್ಯನಿರ್ವಹಣೆಗೆ ಆದ್ಯತೆ ನೀಡಬೇಕು. ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗದೆ, ಅಭ್ಯರ್ಥಿಗಳ ಹಿನ್ನೆಲೆ ಮತ್ತು ಸೇವಾ ಮನೋಭಾವವನ್ನು ಪರಿಶೀಲಿಸಿ ಮತ ಚಲಾಯಿಸಬೇಕು ಎಂದು ಕರೆ ನೀಡಿದರು.ಮತದಾನ ಮಾಡುವುದು ಕೇವಲ ಹಕ್ಕು ಮಾತ್ರವಲ್ಲ, ದೇಶದ ಭವಿಷ್ಯವನ್ನು ನಿರ್ಧರಿಸುವ ಪ್ರಮುಖ ಪ್ರಜಾಪ್ರಭುತ್ವದ ಕರ್ತವ್ಯವಾಗಿದೆ. ಜಾಗೃತಿಯಿಂದ ಮತ ಚಲಾಯಿಸುವ ಮೂಲಕ ಉತ್ತಮ ನಾಯಕತ್ವವನ್ನು ರೂಪಿಸುವುದರ ಜೊತೆಗೆ ಜನರ ಹಿತದೃಷ್ಟಿಯಿಂದ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು.

ಈ ಸಮಾಲೋಚನಾ ಸಭೆಯಲ್ಲಿ ಜೈ ಪ್ರಕಾಶ್, ನೋಯೆಲ್, ಅಭಿಲಾಷ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಜಾಗೃತಿಯಿಂದ ಮತ ಚಲಾಯಿಸೋಣ, ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡೋಣ ಹಾಗೂ ಪ್ರಜಾಪ್ರಭುತ್ವದ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸೋಣ ಎಂಬ ಸಂದೇಶದೊಂದಿಗೆ ಸಭೆ ನಡೆಯಿತು.

# ದಸರಾ ಹೊತ್ತಿಗೆ ಕೊಡಗಿನ ಹಾಡಿ ಜನರ ಬದುಕಿನಲ್ಲಿ ಬೆಳಕು: ವಿದ್ಯುತ್ ಯೋಜನೆ ಉದ್ಘಾಟಿಸಿದ ಶಾಸಕ ಪೊನ್ನಣ್ಣ

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ತಿತಿಮತಿ ಸಮೀಪದ ಆದಿವಾಸಿ ಹಾಡಿಗಳಲ್ಲಿ ಸೂರ್ಯಾಸ್ತವಾಗುತ್ತಿದ್ದಂತೆ ಜನರ ಬದುಕಿನಲ್ಲಿ ಕೂಡ ಕತ್ತಲು ಆವರಿಸಿದಂತಾಗುತ್ತಿತ್ತು. ತಲೆಮಾರುಗಳಿಂದ ಈ ಜನರ ಬದುಕಿನಲ್ಲಿ ಕತ್ತಲೆ ಕೇವಲ ಬೆಳಕಿನ ಕೊರತೆಯಾಗಿರಲಿಲ್ಲ; ಅದು ಅವರ ಜೀವನದ ಒಂದು ಭಾಗವೇ ಆಗಿತ್ತು.

ಈ ವಾರ 4.84 ಕೋಟಿ ರೂಪಾಯಿ ವೆಚ್ಚದ ವಿದ್ಯುತ್ ಯೋಜನೆ ಉದ್ಘಾಟನೆಯಾಗುವುದರೊಂದಿಗೆ ಜನರ ಬದುಕಲ್ಲಿ ಬೆಳಕು ಬಂದಂತಾಗಿದೆ. ಜಂಗಲ್ ಹಾಡಿ, ಆಯುರ್ ಸುರುಳಿ ಹಾಡಿ, ಚೀನಿ ಹುಡ್ಲು ಹಾಡಿ ಮತ್ತು ಚೊಂಬು ಕಾಡು ಹಾಡಿಗಳಿಗೆ ಕೊನೆಗೂ ವಿದ್ಯುತ್ ಬೆಳಕು ತಲುಪಿದೆ.

ನಮ್ಮ ಮನೆಗಳು ಈ ರೀತಿ ಬೆಳಗುವುದನ್ನು ನೋಡುವ ದಿನ ಬರುತ್ತದೆ ಎಂದು ನಾವು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಸ್ವಿಚ್ ಹಾಕಿದ ತಕ್ಷಣ ಮನೆಗಳಲ್ಲಿ ಬೆಳಕು ಮೂಡಿದಾಗ ನಾವೆಲ್ಲರೂ ಸಂಭ್ರಮದಿಂದ ಕುಣಿದಾಡಿದೆವು ಎಂದು ಚೀನಿ ಹುಡ್ಲು ಹಾಡಿಯ ನಿವಾಸಿ ಪಣಿಯೇರವರ ಸಿ. ರಾಮು ಹೇಳಿದರು.

ಯೋಜನೆ ನಾಲ್ಕು ತಿಂಗಳ ಹಿಂದೆಯೇ ಪೂರ್ಣಗೊಂಡಿದ್ದರೂ ಉದ್ಘಾಟನೆ ವಿಳಂಬವಾಗಿತ್ತು. ಇಷ್ಟು ದಿನ ಕತ್ತಲೆಯಲ್ಲೇ ಬದುಕುತ್ತಿದ್ದ ನಮಗೆ ಯೋಜನೆ ಪೂರ್ಣಗೊಂಡ ಬಳಿಕ ಸಂತೋಷ ತಡೆಯಲಾಗಲಿಲ್ಲ. ವಿದ್ಯುತ್ ಘಟಕವನ್ನು ಉದ್ಘಾಟಿಸುವಂತೆ ನಮ್ಮ ಶಾಸಕರನ್ನು ಒತ್ತಾಯಿಸಿದೆವು. ನಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕ ದೊರೆತಾಗ ಎಲ್ಲರ ಮುಖದಲ್ಲೂ ಮೂಡಿದ ಸಂತೋಷವನ್ನು ನೀವು ನೋಡಬೇಕಿತ್ತು ಎಂದು ಹೇಳಿದರು.



ತಿತಿಮತಿ ಅರಣ್ಯ ಅಂಚಿನಲ್ಲಿರುವ ಈ ನಾಲ್ಕು ಹಾಡಿಗಳಲ್ಲಿ ಜೇನು ಕುರುಬ, ಪಣಿಯೇರ ಯರವ ಮತ್ತು ಪಂಜಾರಿ ಯರವ ಎಂಬ ಮೂರು ಆದಿವಾಸಿ ಸಮುದಾಯಗಳಿಗೆ ಸೇರಿದ 185ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿವೆ.

ತಲೆಮಾರುಗಳಿಂದ ಇಲ್ಲಿಯೇ ವಾಸಿಸುತ್ತಿರುವ ನಿವಾಸಿಗಳು, ಈಗಷ್ಟೇ ನೈಜ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ ಎನ್ನುತ್ತಾರೆ. ಈ ಹಿಂದೆ ಪಡಿತರ ಚೀಟಿಯ ಮೂಲಕ ಸಿಗುತ್ತಿದ್ದ ಸೀಮೆಎಣ್ಣೆಯಿಂದ ದೀಪಗಳನ್ನು ಹಚ್ಚುತ್ತಿದ್ದೆವು. ಆದರೆ, ಅರಣ್ಯ ಇಲಾಖೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಒದಗಿಸಲು ಆರಂಭಿಸಿದ ಬಳಿಕ ಸೀಮೆಎಣ್ಣೆ ಪೂರೈಕೆ ಸ್ಥಗಿತಗೊಂಡಿತು. ಇದರಿಂದ ಮನೆಗಳಲ್ಲಿ ದೀಪ ಹಚ್ಚುವುದಕ್ಕೂ ಪರದಾಡುವಂತಾಯಿತು ಎಂದು ರಾಮು ವಿವರಿಸಿದರು.

ನಂತರ ಹಾಡಿಗಳಿಗೆ ಸೌರ ದೀಪಗಳನ್ನು ಒದಗಿಸಲಾಗಿತ್ತು. ಆದರೆ, ಅವು ಹೆಚ್ಚು ಕಾಲ ಬಾಳಿಕೆ ಬರದೆ ಹಾಳಾದವು. ಇದರಿಂದಾಗಿ ಮಕ್ಕಳಿಗೆ ಓದಲು ತೊಂದರೆಯಾಗುತ್ತಿತ್ತು. ಇದೀಗ ವಿದ್ಯುತ್ ಸಂಪರ್ಕ ದೊರೆತಿರುವುದರಿಂದ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತಾಗಿದೆ.

ಆದರೆ, ಹಾಡಿಗಳಲ್ಲಿರುವ ಯರವ ಸಮುದಾಯದವರು ಇನ್ನೂ ಶಾಶ್ವತ ಮನೆಗಳಿಗಾಗಿ ಕಾಯುತ್ತಿದ್ದಾರೆ. ವಿದ್ಯುತ್ ಮೀಟರ್ ಬೋರ್ಡ್‌ಗಳನ್ನು ಅಳವಡಿಸಲಾಗಿದ್ದರೂ, ಅನೇಕ ಕುಟುಂಬಗಳು ಇಂದಿಗೂ ಟಾರ್ಪಾಲಿನ್‌ನಿಂದ ನಿರ್ಮಿಸಿದ ತಾತ್ಕಾಲಿಕ ಗುಡಿಸಲುಗಳಲ್ಲೇ ವಾಸಿಸುತ್ತಿವೆ.

ಆದಿವಾಸಿ ಸಮುದಾಯಕ್ಕೆ ಸೇರಿದ ಜೇನು ಕುರುಬರಿಗೆ ಐಟಿಡಿಪಿ ಇಲಾಖೆ ಮೂಲಕ ಸರ್ಕಾರಿ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಒದಗಿಸಲಾಗುತ್ತಿದೆ. ಈ ಹಿಂದೆ ಐಟಿಡಿಪಿ ಇಲಾಖೆಯ ವ್ಯಾಪ್ತಿಯಲ್ಲಿದ್ದ ಪಣಿಯೇರ ಯರವ ಮತ್ತು ಪಂಜಾರಿ ಯರವ ಸಮುದಾಯಗಳನ್ನು ಬಳಿಕ ವಾಲ್ಮೀಕಿ ನಿಗಮಕ್ಕೆ ವರ್ಗಾಯಿಸಲಾಗಿದ್ದು, ಈಗ ಅಲೆಮಾರಿ ನಿಗಮದ ವ್ಯಾಪ್ತಿಗೆ ಸೇರಿಸಲಾಗಿದೆ ಎಂದು ಹೇಳಿದರು.

ಜೇನು ಕುರುಬರಿಗೆ ಆದ್ಯತೆಯ ಮೇರೆಗೆ ಸೌಲಭ್ಯಗಳು ಸಿಗುತ್ತಿವೆ. ಆದರೆ, ಹಾಡಿಯ ಯರವ ಸಮುದಾಯದವರು ಇನ್ನೂ ಶಾಶ್ವತ ಮನೆಗಳಿಗಾಗಿ ಕಾಯುತ್ತಿದ್ದಾರೆ. 2012ರಲ್ಲಿ ಯರವ ಸಮುದಾಯದವರಿಗೆ ಮಂಜೂರಾದ 25ಕ್ಕೂ ಹೆಚ್ಚು ಮನೆಗಳ ಕಾಮಗಾರಿ ಇಂದಿಗೂ ಪೂರ್ಣಗೊಂಡಿಲ್ಲ. ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಅಲೆಯುತ್ತಾ, ಇಂದಿಗೂ ನಾವು ನಿಜವಾದ ಅಲೆಮಾರಿಗಳಂತೆ ಬದುಕುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಾಡಿಯಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂದು ರಾಮು ಹೇಳಿದರು. ಹಾಲಿ ಶಾಸಕರ ಪ್ರಯತ್ನದಿಂದ ಉತ್ತಮ ರಸ್ತೆ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯುತ್ ಬೆಳಕು ದೊರೆತಂತೆ ಶಾಶ್ವತ ಸೂರಿನ ಕನಸೂ ಶೀಘ್ರದಲ್ಲೇ ನನಸಾಗಬಹುದು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

# ಮೊದೂರು ಗ್ರಾಮದ ಶ್ರೀಮತಿ ವಸುಧ ಶ್ರೀನಿಧಿ ಅವರ ಮನೆಯಲ್ಲಿ ದಸರಾ ಗೊಂಬೆಗಳ ದರ್ಬಾರ್

ಕೆ ಆರ್ ಪೇಟೆ ಮೊದೂರು ಗ್ರಾಮದ ವಸುಧಾ ಶ್ರೀನಿಧಿ ಅವರ ಮನೆಯಲ್ಲಿ ಶರನ್ನವರಾತ್ರಿಯ ಅಂಗವಾಗಿ ದಸರಾ ಗೊಂಬೆಗಳ ಪ್ರದರ್ಶನವು ಆರಂಭವಾಗಿದೆ. ಒಂದು ಸಾವಿರಕ್ಕೂ ಹೆಚ್ಚಿನ ಗೊಂಬೆಗಳನ್ನು ಶರನ್ನವರಾತ್ರಿಯ ಅಂಗವಾಗಿ ತಮ್ಮ ಮನೆಯಲ್ಲಿ ಕೂರಿಸಿ ದಸರಾ ಗೊಂಬೆಗಳ ದರ್ಬಾರ್ ಆಯೋಜಿಸಿ ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಕಳೆದ 20 ವರ್ಷಗಳಿಂದ ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ವಸುಧ ಶ್ರೀನಿಧಿ ಅಯ್ಯಂಗಾರ್ ಅವರ ಕಾರ್ಯವು ತಾಲೂಕಿನ ಜನತೆಯ ಮೆಚ್ಚುಗೆಗೆ ಪಾತ್ರರಾಗಿದರೆ.

ಶ್ರೀರಾಮಾಯಣ, ಮಹಾಭಾರತದ ಕಥಾ ಸಾರವನ್ನು ತಿಳಿಸುವ ಗೊಂಬೆಗಳು, ದಸರಾ ಜಂಭೂ ಸವಾರಿ, ಮಹಿಷಾಸುರ, ಶ್ರೀ ಚಾಮುಂಡೇಶ್ವರಿ, ದ್ರೌಪದಿ ವಸ್ತ್ರಪಹರಣದ ಸಂದರ್ಭದಲ್ಲಿ ಶ್ರೀಕೃಷ್ಣನು ಬಂದು ಕಾಪಾಡುವ ಗೊಂಬೆಗಳು, ಭೂದೇವಿ ಸಮೇತ ಶ್ರೀಲಕ್ಷ್ಮೀ ವರಹನಾಥಸ್ವಾಮಿ ಗೊಂಬೆ, ಸಪ್ತ ಋಷಿಗಳು, ಶ್ರೀನಿವಾಸ ಕಲ್ಯಾಣ, ಪುರಿಜಗನ್ನಾಥ, ಲವ ಕುಶರು ಕಾಡಿನಲ್ಲಿ ಸಂಚರಿಸುತ್ತಿರುವುದು, ನವ ದುರ್ಗೆಯರ ಗೊಂಬೆಗಳು ಸೇರಿದಂತೆ ಮಕ್ಕಳಿಗೆ ನೀತಿ ಕಥೆಯನ್ನು ತಿಳಿಸುವ ವಿವಿಧ ಗೊಂಬೆಗಳು ಮಕ್ಕಳು, ಪೋಷಕರು ಹಾಗೂ ಮಹಿಳೆಯರನ್ನು ಆಕರ್ಷಿಸುತ್ತಿವೆ

. ಅಕ್ಟೋಬರ್ 12ರಿಂದ ಅಕ್ಟೋಬರ್ 26ರವರೆಗೂ ದಸರಾ ಬೊಂಬೆಗಳ ಉಚಿತ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೊಂಬೆಗಳ ದರ್ಶನ ಪಡೆದು ಪ್ರಸಾದ ಸ್ವೀಕರಿಸುವಂತೆ ವಸುಧಾ ಮತ್ತು ಶ್ರೀನಿಧಿ ಅಯ್ಯಂಗಾರ್ ದಂಪತಿಗಳು ಮನವಿ ಮಾಡಿದ್ದಾರೆ.



ದಸರಾ ಬೊಂಬೆಗಳ ಹಬ್ಬ ಅಥವಾ ಗೊಂಬೆ ಹಬ್ಬವು ಮನೆಮನೆಗಳಲ್ಲಿ ಸಡಗರ ಸಂಭ್ರಮದಿಂದ ಆಚರಿಸುವ ಸುಂದರವಾದ ಸಂಪ್ರದಾಯವಾಗಿದೆ. ವಿಶೇಷವಾಗಿ ಮೈಸೂರು, ಮಂಡ್ಯ, ಬೆಂಗಳೂರು ಹಾಗೂ ದಕ್ಷಿಣ ಕರ್ನಾಟಕದ ಹಲವು ಭಾಗಗಳಲ್ಲಿ ಈ ಗೊಂಬೆ ಹಬ್ಬದ ಆಚರಣೆ ಜನಪ್ರಿಯವಾಗಿದೆ. ದಸರಾ ಬೊಂಬೆಗಳು ನಮ್ಮ ಭಾರತೀಯ ಸಂಸ್ಕೃತಿ, ಪರಂಪರೆ, ಧಾರ್ಮಿಕ ನಂಬಿಕೆ ಮತ್ತು ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತಿವೆ.

ಬೊಂಬೆಗಳ ಮೂಲಕ ಮಕ್ಕಳಿಗೆ ಪುರಾಣಗಳು, ಸಂಪ್ರದಾಯಗಳು, ನೀತಿ ಕಥೆಗಳು ಮತ್ತು ಕುಟುಂಬದ ಮೌಲ್ಯಗಳನ್ನು ತಿಳಿಸುತ್ತಿರುವ ದಸರಾ ಬೊಂಬೆಗಳ ಈ ಹಬ್ಬವು ಕೇವಲ ಒಂದು ಅಲಂಕಾರದ ಆಚರಣೆಯಲ್ಲ ಇದು ಕುಟುಂಬದ ಸದಸ್ಯರನ್ನು ಒಗ್ಗೂಡಿಸುವ, ನೆರೆಹೊರೆಯವರೊಂದಿಗೆ ಸ್ನೇಹ ಸೌಹಾರ್ದತೆಯನ್ನು ಬೆಳೆಸುವ ಮತ್ತು ನಮ್ಮ ಮುಂದಿನ ಪೀಳಿಗೆಗೆ ನಮ್ಮ ಸಂಪ್ರದಾಯಗಳನ್ನು ಪರಿಚಯಿಸುವ ಹಬ್ಬವಾಗಿದೆ. ನವರಾತ್ರಿಯ 9 ದಿನಗಳು ದುರ್ಗಾದೇವಿಯ ಶಕ್ತಿ ಮತ್ತು ಒಳ್ಳೆಯತನದ ಮಹತ್ವವನ್ನು ಸಾರುತ್ತವೆ. ವಿಜಯದಶಮಿಯು ಕೆಟ್ಟದ್ದರ ಮೇಲೆ ಒಳ್ಳೆಯತನವು ವಿಜೃಂಭಿಸುವ ವಿಜಯದ ಸಂಕೇತದ ಹಬ್ಬವಾಗಿದೆ. ಕಲೆಗೆ ಪ್ರೋತ್ಸಾಹ ನೀಡುತ್ತಿರುವ ಮಣ್ಣಿನ, ಮರದ ಮತ್ತು ಕಾಗದಗಳ ಗೊಂಬೆಗಳ ತಯಾರಿಕೆಯು ಕುಶಲಕರ್ಮಿಗಳಿಗೆ ಕಲೆಯನ್ನು ಉಳಿಸಿ ಬೆಳೆಸಲು ಸಹಾಯಕವಾಗಿವೆ.

ಕೆ ಆರ್ ಪೇಟೆ ತಾಲೂಕಿನಲ್ಲಿ ಸುವಿಧ ಮತ್ತು ಶ್ರೀನಿಧಿ ದಂಪತಿಗಳು ಸತತವಾಗಿ 20 ವರ್ಷಗಳಿಂದ ದಸರಾ ಬೊಂಬೆಗಳನ್ನು ಕೂರಿಸುತ್ತಾ ಬಂದಿದ್ದು ಈ ಕಲಾ ಪ್ರದರ್ಶನಕ್ಕೆ ತಾಲೂಕಿನಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ ಅವರು ಮೊದೂರು ಗ್ರಾಮದಲ್ಲಿ ವಸುಧ ಶ್ರೀನಿಧಿ ಅವರ ಮನೆಯಲ್ಲಿ ಸಾಂಪ್ರದಾಯಕವಾಗಿ ಕೂರಿಸಿ ಪೂಜಿಸುತ್ತಿರುವ ದಸರಾ ಗೊಂಬೆಗಳ ದರ್ಬಾರ್ ಅನ್ನು ವೀಕ್ಷಿಸಿ ಸಂಭ್ರಮಿಸಿದರಲ್ಲದೇ ವಸುಧಾ ಶ್ರೀನಿಧಿ ಅವರ ಸಂಸ್ಕೃತಿ ಪರಂಪರೆ ಉಳಿಸಿ ಯುವ ಜನರಲ್ಲಿ ಜಾಗೃತಿ ಮೂಡಿಸುತ್ತಿರುವ ಸೇವಾ ಕಾರ್ಯವನ್ನು ಶ್ಲಾಘಿಸಿದರು. ಉದ್ಯಮಿ ಮೊದೂರು ಮಂಜುನಾಥ್, ಶ್ರೀಧರ್ ಬುದ್ಧಿಯವರು, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಗಂಜಿಗೆರೆ ಮಹೇಶ್, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಹಿರಿಯ ಪತ್ರಕರ್ತರಾದ ಕೆ.ಆರ್.ನೀಲಕಂಠ ಮತ್ತಿತರರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠ್ ನ್ಯಾಯವಾದಿಗಳಲ್ಲಿ ಮತಯಾಚನೆ



ತುಮಕೂರು:ಆಗ್ನೇಯ ಪದವಿಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠ್ ಅವರು ಕಾಂಗ್ರೆಸ್ ಮುಖಂಡರ ಜೊತೆ ಮಂಗಳವಾರ ನಗರದ ವಿವಿಧೆಡೆ ಮತದಾರರನ್ನು ಭೇಟಿ ಮಾಡಿ ಮತಯಾಚನೆ ಮಾಡಿದರು.

ನ್ಯಾಯಾಲಯ ಆವರಣದಲ್ಲಿ ಜಿಲ್ಲಾ ವಕೀಲರ ಸಂಘಕ್ಕೆ ಭೇಟಿ ನೀಡಿ ವಕೀಲರಲ್ಲಿ ಮತಯಾಚನೆ ಮಾಡುತ್ತಾ ಚುನಾವಣೆಯಲ್ಲಿ ತಮಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಕೋರಿದರು.ಈ ವೇಳೆ ಮಾತನಾಡಿದ ಅಭ್ಯರ್ಥಿ ಶಶಿ ಹುಲಿಕುಂಟೇಮಠ್,

ಆಗ್ನೇಯ ಪದವಿಧರರ ಕ್ಷೇತ್ರಕ್ಕೆ ಯುವ ಅಭ್ಯರ್ಥಿ ಬೇಕೆಂದು ಕಾಂಗ್ರೆಸ್ ನಾಯಕರು ವರ್ಷದ ಹಿಂದೆಯೇ ತಮ್ಮನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದ್ದರು.ಆಗಿನಿಂದಲೂ ತಾವು ನಿರಂತರವಾಗಿ ಆಗ್ನೇಯಕ್ಷೇತ್ರ ಪ್ರವಾಸ ಮಾಡಿ ಪದವಿಧರ ಮತದಾರರನ್ನು ಮುಖತ: ಭೇಟಿ ಮಾಡಿ, ಅವರ ಬೆಂಬಲ ಕೋರಿದ್ದು, ಎಲ್ಲಾ ಕ್ಷೇತ್ರಗಳ ಶಾಸಕರು, ಮಾಜಿ ಶಾಸಕರ ಬೆಂಬಲ ಪಡೆದುಅವರೊಂದಿಗೆ ಸಂಪರ್ಕದಲ್ಲಿದ್ದು ಅವರು ತಮ್ಮ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಕ್ಷೇತ್ರದೆಲ್ಲೆಡೆ ತಮ್ಮ ಪರವಾಗಿ ಉತ್ತಮ ಬೆಂಬಲ ವ್ಯಕ್ತವಾಗಿದ್ದು ತಮ್ಮ ಗೆಲುವು ಖಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ, ಮಾಜಿ ಶಾಸಕ ಡಾ.ಎಸ್. ರಫೀಕ್‌ಅಹಮದ್, ಜಿಲ್ಲಾಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್‌ಅಹ್ಮದ್, ನಿಂಗರಾಜು, ಶಿವಕುಮಾರಸ್ವಾಮಿ, ಇಲಾಹಿ ಸಿಕಂದರ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಹಿರೇಹಳ್ಳಿ ಮಹೇಶ್, ಖಜಾಂಚಿ ಸಿಂಧೂ, ವಕೀಲರಾದ ಹಾಲನೂರುಅನಂತಕುಮಾರ್, ವೆಂಕಟೇಶಯ್ಯ, ಮಹಲಿಂಗಯ್ಯ, ವೆಂಕಟೇಶ್, ನಗರಪಾಲಿಕೆ ಮಾಜಿ ಸದಸ್ಯರಾದ ಟಿ.ಎಂ. ಮಹೇಶ್,ಎನ್.ಮಹೇಶ್ ಮೊದಲಾದವರು ಮತಯಾಚನೆ ಸಂದರ್ಭದಲ್ಲಿ ಹಾಜರಿದ್ದರು.

# ಜಿ.ಪಂ,ತಾ.ಪಂ, ಚುನಾವಣೆ ಸಿದ್ಧತೆಗೆ ಕಾಂಗ್ರೆಸ್ ಮುಖಂಡರ ಸಭೆ

## ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆ ಪರ ಪ್ರಚಾರ : ನಂಜೇಗೌಡ



ಮಾಲೂರು: ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಹಿನ್ನೆಲೆಯಲ್ಲಿ ಅಭ್ಯರ್ಥಿಗಳ ಆಯ್ಕೆ, ಕ್ಷೇತ್ರವಾರು ಸೀಟು ಹಂಚಿಕೆ ಹಾಗೂ ಪಕ್ಷದ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಕಾಂಗ್ರೆಸ್ ಮುಖಂಡರ ಪೂರ್ವಭಾವಿ ಸಭೆ ನಡೆಸಲಾಯಿತು ಎಂದು ಶಾಸಕ ಕೆ.ವೈ. ನಂಜೇಗೌಡ ತಿಳಿಸಿದರು.

ತಾಲ್ಲೂಕಿನ ಸೀತನಾಯಕನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ವಿಧಾನಸಭಾ ಕ್ಷೇತ್ರದ ವಿವಿಧ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಮುಖಂಡರ ಪೂರ್ವಭಾವಿ ಸಭೆ ಮತ್ತು ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆ ಅವರ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಭೆಯಲ್ಲಿ ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಸಿದ್ಧತೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಕ್ಷೇತ್ರವಾರು ಅಭ್ಯರ್ಥಿಗಳ ಆಯ್ಕೆ, ಸೀಟು ಹಂಚಿಕೆ, ಸ್ಥಳೀಯ ಮುಖಂಡರ ಅಭಿಪ್ರಾಯ ಸಂಗ್ರಹ ಹಾಗೂ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕಾರ್ಯತಂತ್ರಗಳ ಬಗ್ಗೆ ಸಮಾಲೋಚನೆ ನಡೆಸಲಾಯಿತು.

ಪ್ರತಿಯೊಂದು ಜಿಲ್ಲಾ ಪಂಚಾಯಿತಿ ಕ್ಷೇತ್ರದ ರಾಜಕೀಯ ಪರಿಸ್ಥಿತಿ, ಸ್ಥಳೀಯ ಮುಖಂಡರ ಪಾತ್ರ ಹಾಗೂ ಪಕ್ಷದ ಸಂಘಟನಾತ್ಮಕ ಸಮನ್ವಯಕ್ಕೆ ಆದ್ಯತೆ ನೀಡುವ ಕುರಿತು ಮುಖಂಡರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಚುನಾವಣೆಗಳಲ್ಲಿ ಪಕ್ಷದ ಯಶಸ್ಸಿಗೆ ಸಂಘಟನಾತ್ಮಕ ಶಿಸ್ತು, ಪರಸ್ಪರ ಸಮನ್ವಯ ಮತ್ತು ಒಗ್ಗಟ್ಟಿನ ಕಾರ್ಯನಿರ್ವಹಣೆ ಅತ್ಯಂತ ಮುಖ್ಯವಾಗಿದ್ದು, ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಸೀಟು ಹಂಚಿಕೆಯವರೆಗೆ ಪ್ರತಿಯೊಂದು ಹಂತದಲ್ಲೂ ಮುಖಂಡರೊಂದಿಗೆ ಸಮಾಲೋಚನೆ ನಡೆಸುವುದು ಅಗತ್ಯ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಇದೇ ಸಂದರ್ಭದಲ್ಲಿ ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆ ಅವರ ಚುನಾವಣಾ ಪ್ರಚಾರದ ಬಗ್ಗೆಯೂ ಚರ್ಚಿಸಲಾಯಿತು. ಪದವೀಧರ ಮತದಾರರನ್ನು ತಲುಪುವುದು, ಅಭ್ಯರ್ಥಿಯ ಪರವಾಗಿ ಪ್ರಚಾರ ಕಾರ್ಯಗಳನ್ನು ಸಮನ್ವಯ ಗೊಳಿಸುವುದು ಹಾಗೂ ಚುನಾವಣೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ವಹಿಸಬೇಕಾದ ಜವಾಬ್ದಾರಿಗಳ ಕುರಿತು ಸಮಾಲೋಚನೆ ನಡೆಸಲಾಯಿತು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಅನಿಲ್ ಕುಮಾರ್, ಮಾಜಿ ಶಾಸಕ ಎ. ನಾಗರಾಜು,

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ವಿಜಯ ನರಸಿಂಹ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಲಿಂಗಾಪುರ ಕೃಷ್ಣಪ್ಪ, ಶೆಟ್ಟಿಹಳ್ಳಿ ರಾಮಮೂರ್ತಿ, ಬಾಳಿಗಾನಹಳ್ಳಿ ಶ್ರೀನಿವಾಸ್, ಗ್ಯಾರಂಟಿ ಯೋಜನೆ ಅಧ್ಯಕ್ಷ ಎಂ. ಆಂಜಿನಪ್ಪ, ರಮೇಶ್ ಗೌಡ, ಕ್ಷೇತ್ರನಹಳ್ಳಿ ವೆಂಕಟೇಶ್ ಗೌಡ, ಸಂಪಗೆರೆ ಮುನಿರಾಜು, ಸಂತೇಹಳ್ಳಿ ನಾರಾಯಣಸ್ವಾಮಿ, ಕುಪ್ಪೂರು ಚನ್ನರಾಯಪ್ಪ, ದಿನ್ನಹಳ್ಳಿ ರಮೇಶ್, ಪಿ. ನಾರಾಯಣಸ್ವಾಮಿ, ಚಂದ್ರಶೇಖರ್ ಗೌಡ, ಎಂ.ವಿ. ಹನುಮಂತಪ್ಪ, ಎಸ್.ವಿ. ಗೋವರ್ಧನ್ ರೆಡ್ಡಿ, ಅಶ್ವಥ್ ರೆಡ್ಡಿ, ಯುವ ನಾಯಕ ಸುನೀಲ್ ನಂಜೇಗೌಡ, ವಿ. ನಾಗೇಶ್, ಮಾಸ್ತಿ ಚೇತನ್, ಬನಹಳ್ಳಿ ಸತೀಶ್, ಅಂಜನಿ ಸೋಮಣ್ಣ ಹಾಗೂ ಎಟ್ಟಕೋಡಿ ವೀರಭದ್ರಪ್ಪ ಸೇರಿದಂತೆ ವಿವಿಧ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಮುಖಂಡರು, ಪಕ್ಷದ ಪದಾಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಹಿಳೆಯರಿಗಾಗಿ ಆಯೋಜಿಸಲಾದ "ಹೊಸ ರುಚಿ" ಕಾರ್ಯಕ್ರಮ ಯಶಸ್ವಿ



ಚಿಂತಾಮಣಿ:ನಗರದ ಸೊಣ್ಣಶೆಟ್ಟಿಹಳ್ಳಿಯಲ್ಲಿ ಮಹಿಳೆಯರ ಪಾಕಕಲೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಅರ್ಥಪೂರ್ಣ ಕಾರ್ಯಕ್ರಮವೊಂದು ಜರುಗಿದೆ.

ಪೂಜ್ಯ ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ದಿವ್ಯ ಮಾರ್ಗದರ್ಶನದಲ್ಲಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಸೊಣ್ಣಶೆಟ್ಟಿಹಳ್ಳಿಯಲ್ಲಿ ಶ್ರೀ ಶಾರದಾ ಜ್ಞಾನವಿಕಾಸ ಕೇಂದ್ರದಲ್ಲಿ "ಹೊಸ ರುಚಿ" ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿತ್ತು. ಮಹಿಳೆಯರಲ್ಲಿ ಪೌಷ್ಟಿಕ ಆಹಾರ ತಯಾರಿಕೆ ಮತ್ತು ಸಾಂಪ್ರದಾಯಿಕ ಅಡುಗೆಯ ಜ್ಞಾನವನ್ನು ವೃದ್ಧಿಸುವ ನಿಟ್ಟಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ಊರಿನ ಮಹಿಳೆಯರು ಅತ್ಯಂತ ಸಡಗರ–ಸಂಭ್ರಮದಿಂದ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಪ್ರಮುಖರಾದ ಸೌಮ್ಯ,ಯಶೋದಾ, ಗಿರಿಜಾ,ವೈಷ್ಣವಿ ಸಂಘದ ಗೀತಾ.ಎಂ ಸೇರಿದಂತೆ ಸಂಘದ ಎಲ್ಲ ಪದಾಧಿಕಾರಿಗಳು, ಗ್ರಾಮದ ಹಿರಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಹೊಸ ಆವಿಷ್ಕಾರಗಳಿಗೆ ಧರ್ಮಸ್ಥಳ ಸಂಸ್ಥೆ ಸದಾ ಮುಂದು ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ.

# ಆಗ್ನೇಯ ಪದವೀಧರ ಕ್ಷೇತ್ರ ಚುನಾವಣೆ ಎನ್.ಡಿ.ಎ ಅಭ್ಯರ್ಥಿ ಕೆಎಂ.ಸುರೇಶ್ ಮತಯಾಚನೆ



ಬಂಗಾರಪೇಟೆ : ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಸಾಮಾನ್ಯ ಕುಟುಂಬದ ಕಾರ್ಯಕರ್ತನಾಗಿದ್ದು, ಕಳೆದ ಮೂರು ದಶಕಗಳಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದು, ಇದೇ ತಿಂಗಳು ನಡೆಯಲಿರುವ ಆಗ್ನೇಯ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಎನ್ ಡಿ ಎ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತಿದ್ದು, ಪದವೀಧರರು ನನಗೆ ಮತ ನೀಡಿ, ಜಯಶೀಲರನ್ನಾಗಿ ಮಾಡಬೇಕು ಎಂದು ಅಭ್ಯರ್ಥಿ ಕೆ ಎಂ ಸುರೇಶ್ ರವರು ಮತದಾರರಲ್ಲಿ ಮನವಿ ಮಾಡಿದರು.

ನಗರದ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಳಿಕ ಎಸ್.ಡಿ.ಸಿ ಕಾಲೇಜಿನ ಆಡಳಿತ ಮಂಡಳಿ ಹಾಗೂ ಉಪನ್ಯಾಸಕರಲ್ಲಿ ಮತಯಾಚಿಸಿ, ಅವರು ಮಾತನಾಡಿದರು. ಭರವಸೆಗಳು: ಆಗ್ನೇಯ ಪದವೀಧರ ಕ್ಷೇತ್ರದಿಂದ ಆಯ್ಕೆ ಆದರೆ ಉದ್ಯೋಗಾವಕಾಶಗಳ ಸೃಷ್ಟಿ, ಕೌಶಲ್ಯ ಅಭಿವೃದ್ಧಿ ಮತ್ತು ಶೈಕ್ಷಣಿಕ ಸಮಾಲೋಚನೆ, ಎನ್‌ಪಿಎಸ್ ನೌಕರರ ನ್ಯಾಯಯುತ ಬೇಡಿಕೆಗೆ ಸಂಪೂರ್ಣ ಬೆಂಬಲ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನಕ್ಕಾಗಿ ಸ್ವಂತ ಖರ್ಚಿನಲ್ಲಿ ಇ–ಗ್ರಂಥಾಲಯ ನಿರ್ಮಾಣ, ಪದವೀಧರರೊಂದಿಗೆ ನಿರಂತರ ಸಂಪರ್ಕ ಹಾಗೂ ಸಮಾಲೋಚನೆ ಮುಖಾಂತರ ಅವರ ಆಶಯಕ್ಕೆ ಬೆನ್ನೆಲುಬಾಗಿ ನಿಲ್ಲುವ ಸಂಕಲ್ಪ ಸೇರಿದಂತೆ ಪದವೀಧರ ಹಿತ ರಕ್ಷಣೆಗಾಗಿ, ಅವರ ಶ್ರೇಯೋಭಿವೃದ್ಧಿಗಾಗಿ ಸದನದಲ್ಲಿ ಧ್ವನಿಯಾಗಲು, ನಮ್ಮ ಅಮೂಲ್ಯ ಮತ ನೀಡಬೇಕು ಎಂದು ಪದವೀಧರರಲ್ಲಿ ವಿನಂತಿಸಿಕೊಂಡರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಶಾಸಕ ಬಿ.ಪಿ ವೆಂಕಟಮುನಿಯಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ವಿ ಮಹೇಶ್, ಬಿಜೆಪಿ ತಾಲೂಕು ಅಧ್ಯಕ್ಷ ಸಂಪಂಗಿ ರೆಡ್ಡಿ, ಜೆಡಿಎಸ್ ತಾಲೂಕ ಅಧ್ಯಕ್ಷ ಬಾಲಕೃಷ್ಣ, ಎನ್ ಡಿ ಎ ಮುಖಂಡರುಗಳಾದ ಹನುಮಪ್ಪ, ಸೀತಾರಾಮಪ್ಪ, ಶ್ರೀನಿವಾಸ ಗೌಡ, ನಾಗೇಶ್, ಎಚ್ ಆರ್ ಶ್ರೀನಿವಾಸ್, ಮಹೇಶ್, ಚೌಡಪ್ಪ, ಸತೀಶ್ ಗೌಡ, ಚಾನ್ ಪಾಷಾ, ಶ್ರೀನಿವಾಸ್ ಮುಖಂಡರುಗಳು, ಕಾರ್ಯಕರ್ತರು ಇದ್ದರು.

# ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ: ರಾಜೇಶ್‌ಗೆ ದಂಡ–04 ವರ್ಷ ಜೈಲು ಶಿಕ್ಷೆ

ಕೋಲಾರ: ಕೋಲಾರ ಜಿಲ್ಲೆಯ ಲೋಕಾಯುಕ್ತ, ಪೊಲೀಸ್ ಠಾಣೆಯಲ್ಲಿ ದಿನಾಂಕ:15.09.2017 ರಂದು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–1988ರ ಪ್ರಕರಣದಲ್ಲಿ ಆರೋಪಿಯಾದ ರಾಜೇಶ್ ಹೆಚ್.ಆರ್ ಬಿನ್ ರಾಮಚಂದ್ರೇಗೌಡ, ದ್ವಿತೀಯ ದರ್ಜೆ ಭೂಮಾಪಕರು, ಭೂಮಾಪನಾ ಶಾಖೆ, ತಹಶೀಲ್ದಾರ್ ಕಛೇರಿ, ಕೋಲಾರ ರವರು ಪಿರ್ಯಾದಿ ಶ್ರೀ ರಾಮಯ್ಯ ಎಂಬುವರ ಬಳಿ ಪಿರ್ಯಾದಿಯವರ ಗ್ರಾಮದ ಖಾತಾ ನಂ:75/79 ರಲ್ಲಿನ ನಿವೇಶನ ಮತ್ತು ಖಾತೆ ಸಂ:128/175 ರಲ್ಲಿನ ವಾಸದ ಮನೆ ಮತ್ತು ಖಾಲಿ ಜಾಗದ ಸ್ವತ್ತಿಗೆ ಇ–ಸ್ವತ್ತು ಮಾಡಿಕೊಡುವಂತೆ ಅರ್ಜಿ ಸಲ್ಲಿಸಿಕೊಂಡಿದ್ದು, ಈ ನಿವೇಶನಗಳ ಸರ್ವೆಗೆ ಸಂಬಂಧಿಸಿದಂತೆ ಸ್ಕೆಚ್ ಹಾಗೂ ತಮ್ಮ ತಂಬ್‌ನ್ನು (ಹೆಬ್ಬಟ್ಟು) ನಾಡಕಛೇರಿಗೆ ನೀಡದೇ ಬಾಕಿ ಉಳಿಸಿಕೊಂಡು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬೇಕಾಗಿದ್ದರೂ ಸಹಾ, ಸರ್ಕಾರಿ ಕೆಲಸ ಮಾಡಿ ಕೊಡಲು ಪಿರ್ಯಾದಿದಾರರ ಬಳಿ 3000/–ರೂಗಳಿಗೆ ಬೇಡಿಕೆ ಇಟ್ಟು, ಅದರಲ್ಲಿ 2500/– ರೂಗಳನ್ನು ದಿ:15.09.2017 ರಂದು ಪಿರ್ಯಾದಿಯವರಿಂದ ಪಡೆಯುವ ಸಂದರ್ಭದಲ್ಲಿ ನಡೆಸಿದ ಟ್ರ್ಯಾಪ್ ಕಾರ್ಯಚರಣೆಯಲ್ಲಿ ಲಂಚದ ಹಣದೊಂದಿಗೆ ಸಿಕ್ಕಿಬಿದ್ದ ಮೇರೆಗೆ ಭ್ರಷ್ಟಾಚಾರ ನಿಗ್ರಹ ದಳ, ಕೋಲಾರದಲ್ಲಿ ಪ್ರಕರಣ ದಾಖಲಾಗಿ ತನಿಖೆಯನ್ನು ಕೈಗೊಂಡಿರುತ್ತದೆ. ತನಿಖಾ ಕಾಲದಲ್ಲಿ ದಾಖಲಿಸಿಕೊಂಡ ಪಿರ್ಯಾದಿದಾರರ ಪಂಚ ಸಾಕ್ಷಿದಾರರ ಹಾಗೂ ಇತರೆ ಸಾಕ್ಷಿದಾರರ ಹೇಳಿಕೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳಿಂದ ಆರೋಪವು ದೃಢಪಟ್ಟಿದ್ದು, ಆರೋಪವು ದೃಢಪಟ್ಟ ಮೇರೆಗೆ ದಿ:25.08.2018ರಂದು ತನಿಖಾಧಿಕಾರಿ ಗಳಾದ ಶ್ರೀ.ರಂಗಸ್ವಾಮಯ್ಯ.ವೈ.ಆರ್. ಪೊಲೀಸ್ ನಿರೀಕ್ಷಕರು, ದೋಷಾ ರೋಪಣಾ ಪಟ್ಟಿಯನ್ನು ಘನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರದಲ್ಲಿ ಸಲ್ಲಿಸಿಕೊಂಡಿದ್ದರು.

ನಂತರ ಘನ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದು ಆರೋಪಿಯಾದ ಶ್ರೀ.ರಾಜೇಶ್. ಹೆಚ್.ಆರ್. ದ್ವಿತೀಯ ದರ್ಜೆ ಭೂಮಾಪಕರು, ಭೂಮಾಪಕರು, ಆನೇಕಲ್ ತಾಲ್ಲೂಕು ಬೆಂಗಳೂರು ನಗರ ರವರ ವಿರುದ್ಧ ಪ್ರಕರಣದಲ್ಲಿನ ಎಲ್ಲಾ ಆರೋಪಗಳು ಸಾಬೀತಾದ ಮೇರೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿಜಯಕುಮಾರ್ ಎಂ.ಆನಂದಶೆಟ್ಟಿ ರವರು 12 ಅಕ್ಟೋಬರ್ 2026 ರಂದು ಆರೋಪಿಯಾದ ರಾಜೇಶ್ ಹೆಚ್.ಆರ್ ರವರಿಗೆ 04ವರ್ಷಗಳ ಜೈಲು ಶಿಕ್ಷೆ ಹಾಗೂ 1,00,000/–ಗಳ ದಂಡವನ್ನು ವಿಧಿಸಲಾಗಿದೆಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾರಮ್ಮ ದೇವಿ 6ನೇ ವಾರ್ಷಿಕೋತ್ಸವ–ತೆಂಗಿನ ಗಿಡ, ದಿನಸಿ ಕಿಟ್ ವಿತರಣೆ



ಮುಳಬಾಗಿಲು : ಶ್ರೀ ಮಾರಮ್ಮ ದೇವಿಯ ಆಶೀರ್ವಾದದಿಂದ ಈ ತಾಲೂಕಿನ ಜನತೆಗೆ ಒಳ್ಳೆಯದಾಗಿ, ಒಳ್ಳೆಯ ಮಳೆ ಬೆಳೆ ರೈತರು ಕೂಲಿಕಾರ್ಮಿಕರು ಸಾರ್ವಜನಿಕರು ನೆಮ್ಮದಿಯಿಂದ ಜೀವನ ನಡೆಸಬೇಕೆಂದು ದೇವರಲ್ಲಿ ಪ್ರಾರ್ಥಿಸಿ, ಜನರಿಗೆ ಸೀತಾ ಫೌಂಡೇಶನ್ ವ್ಯವಸ್ಥಾಪಕರಾದ ಕಸಬಾ ಎಂ. ಮಾರಂಡಹಳ್ಳಿ ಕಿರಣ್ ರವರು ದೇವರಲ್ಲಿ ಪ್ರಾರ್ಥಿಸಿ ಜನರಿಗೆ ಶುಭ ಹಾರೈಸಿದರು.

ತಾಲೂಕಿನ ಕಸಬಾ ಎಂ . ಮಾರಂಡಹಳ್ಳಿ ಗ್ರಾಮದಲ್ಲಿ ಶ್ರೀ ಮಾರಮ್ಮ ದೇವಿಯ 6 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ನಮ್ಮ ತಾಲೂಕಿನ ಎಂ. ರಾಮಾಪುರ ಗ್ರಾಮದ ವಾಸಿಗಳಾದ ಸೀತಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರು ಹಾಗೂ ಶ್ರೀ ಮಾರಮ್ಮ ದೇವಿಯ ದೇವಸ್ಥಾನದ ಸೇವಾಕರ್ತರು ಆಗಿರುವ ಸಂಪತ್ ಕುಮಾರ್ ರವರು ಸುಮಾರು 6 ವರ್ಷಗಳಿಂದ ಈ ದೇವಾಲಯದಲ್ಲಿ ವಿಶೇಷ ಪೂಜೆ ಅನ್ನ ಸಂತರ್ಪಣೆ, ತೆಂಗಿನ ಗಿಡ ನೀಡುವ ಹಾಗೂ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದು, ಅದೇ ತರ ಈ ವರ್ಷವೂ ಶ್ರೀ ಮಾರಮ್ಮ ದೇವಿಯ 6 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದ ಅಂಗವಾಗಿ ದೇವರಿಗೆ ವಿಶೇಷ ಪೂಜೆ ಅಭಿಷೇಕ ಹೂವಿನ ಅಲಂಕಾರ ಮಾಡಿ , ಸಾರ್ವಜನಿಕರಿಗೆ ರೈತರಿಗೆ 1008 ತೆಂಗಿನ ಗಿಡಗಳನ್ನು ಉಚಿತವಾಗಿ ವಿತರಣೆ ಮಾಡಲಾಯಿತು. ಹಾಗೆಯೇ ಭಕ್ತಾದಿಗಳಿಗೆ ಮತ್ತು ಬಡವರಿಗೆ ದಿನಸಿಕಿಟ್ಟು ಮತ್ತು ಬಟ್ಟೆಗಳನ್ನು ವಸ್ತ್ರ ದಾನ ಮಾಡಲಾಯಿತು.

ಹಾಗೂ ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಮಾಡಿ ದೇವರ ಕೃಪೆಗೆ ಪಾತ್ರರಾದರು. ಸೀತಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರಾದ ಸಂಪತ್ ಕುಮಾರ್ ರವರ ನೇತೃತ್ವದಲ್ಲಿ ಶ್ರೀ ಮಾರಮ್ಮ ದೇವಿಯ ವಾರ್ಷಿಕೋತ್ಸವವು ಅದು ಈಗ ಅನೇಕ ಸಾಮಾಜಿಕ ಕಾರ್ಯಗಳ ಮೂಲಕ ನೆರವೇರಿದ್ದು, ಮುಂದಿನ ದಿನಗಳಲ್ಲೂ ಈ ದೇವರ ಆಶೀರ್ವಾದ ಮತ್ತು ಅನುಗ್ರಹದಿಂದ ಇನ್ನಷ್ಟು ದೇವರ ಕಾರ್ಯ ಮತ್ತು ಜನರ ಸೇವೆ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಸೀತಾ ಫೌಂಡೇಶನ್ ಮತ್ತು ಸಂಪತ್ ಕುಮಾರ್ ಅವರು ನಡೆಸಿಕೊಳ್ಳುತ್ತಾರೆ ಎಂದು ಕಿರಣ್ ಅವರು ತಿಳಿಸಿದರು.

ನಂತರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಂ ರಾಮಾಪುರ ಆರ್ ಎಂ ಜಿ ಗಂಗಾಧರಯ್ಯ ಮಾತನಾಡಿ ನಮ್ಮ ಸೀತಾ ಫೌಂಡೇಶನ್ ಸಂಪತ್ ಕುಮಾರ್ ಅವರು ನಮ್ಮ ತಾಲೂಕಿನಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದು, ಅದೇ ರೀತಿ ಶ್ರೀ ಮಾರಮ್ಮ ದೇವಾಲಯವನ್ನು ನಿರ್ಮಾಣ ಮಾಡಿ ದೇವರ ಕಾರ್ಯ ಹಾಗೂ ದೇವರ ಹೆಸರಿನಲ್ಲಿ ಅವರ ಕೈಲಾದಷ್ಟು ಬಡವರಿಗೆ ಸಹಾಯವನ್ನು ಮಾಡುತ್ತಿದ್ದಾರೆ ಅವರು ಕುಟುಂಬಕ್ಕೆ ಒಳ್ಳೆಯ ಆರೋಗ್ಯ ಐಶ್ವರ್ಯ ನೀಡಿ ಈ ತಾಲೂಕಿನ ಜನತೆಗೆ ಒಳ್ಳೆಯ ಮಳೆ,ಬೆಳೆ, ಆರೋಗ್ಯ ನೀಡಿ, ಈ ದೇವರ ಕೃಪೆಯಿಂದ ಎಲ್ಲರೂ ಸಮೃದ್ಧಿಯಾಗಿ ಜೀವನ ಸಾಗಿಸಬೇಕು ಎಂದು ದೇವರಲ್ಲಿ ಪ್ರಾರ್ಥಿಸಿ, ಸಂಪತ್ ಕುಮಾರ್ ರವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಸೀತಾ ಫೌಂಡೇಶನ್ ಸಂಪತ್ ಕುಮಾರ್ ಅವರ ತಂದೆ ಚೌಡಪ್ಪ, ಕಿರಣ್, ಹಾಗೂ ಮಾರಂಡಹಳ್ಳಿ ಗ್ರಾಮಸ್ಥರು, ಸುತ್ತುಮತಿನ ಅಗ್ರ ಗ್ರಾಮಸ್ಥರು ಭಕ್ತಾದಿಗಳು ಭಾಗವಹಿಸಿದ್ದರು.

# ಅಕ್ಟೋಬರ್ 26 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಬೆಂ. ಗ್ರಾ : ಅಕ್ಟೋಬರ್ 26 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ, ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು, ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿ ಇರುವದರಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಗುತ್ತದೆ ಎಂದರು. ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಉಪನ್ಯಾಸ, ಎಸ್ಸೆಸ್ಸೆಲ್ಸಿ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಸನ್ಮಾನ ಇರಲಿದ್ದು ಕಾರ್ಯಕ್ರಮ ಅರ್ಥಪೂರ್ಣ ಆಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಎಡಿಸಿ ಸೂಚಿಸಿದರು. ಸಭೆಯಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ ರಾಮಕೃಷ್ಣಯ್ಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪಾಂಡುರಂಗ, ಜಿಲ್ಲಾಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ವಿಕಲಚೇತನರು, ಹಿರಿಯ ನಾಗರಿಕರಿಗೆ–ಚಲನವಲನ ತಂತ್ರಜ್ಞಾನ ಪರಿಚಯಿಸಲು ಮಹತ್ವದ ಹೆಜ್ಜೆ



ಬೆಂಗಳೂರು : ವಿಕಲಚೇತನರು, ಹಿರಿಯ ನಾಗರಿಕರು ಹಾಗೂ ಪುನರ್ವಸತಿ ಅಗತ್ಯವಿರುವವರಿಗೆ ಅತ್ಯಾಧುನಿಕ ಚಲನವಲನ ಮತ್ತು ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ, ಬೆಂಗಳೂರಿನ ಆಸ್ಟ್ರಿಚ್ ಮೊಬಿಲಿಟಿ ಇನ್‌ಸ್ಟ್ರುಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅಮೆರಿಕದ ಪ್ರೈಡ್ ಮೊಬಿಲಿಟಿ ಪ್ರಾಡಕ್ಟ್ಸ್ ಕಾರ್ಪೊರೇಷನ್ ಸಂಸ್ಥೆಗಳು ಕಾರ್ಯತಂತ್ರದ ಪಾಲುದಾರಿಕೆಯನ್ನು ಘೋಷಿಸಿವೆ. ಬೆಂಗಳೂರಿನ ಪೋಸ್ಪೋಲ್ ಎಕೋಸಿಸ್ಟಮ್‌ನಲ್ಲಿ ಈ ಮಹತ್ವದ ಪಾಲುದಾರಿಕೆಯನ್ನು ಘೋಷಿಸಲಾಗಿದ್ದು, ಭಾರತದಲ್ಲಿ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಬಹುದಾದ ಸುಧಾರಿತ ಚಲನವಲನ ಸಾಧನಗಳನ್ನು ಹೆಚ್ಚು ಜನರಿಗೆ ತಲುಪಿಸುವ ಗುರಿಯನ್ನು ಹೊಂದಿದೆ. ಈ ಪಾಲುದಾರಿಕೆಯ ಮೂಲಕ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ವಿದ್ಯುತ್ ಚಾಲಿತ ಗಾಲಿಕುರ್ಚಿಗಳು, ವಿಶೇಷ ಆಸನ ವ್ಯವಸ್ಥೆಗಳು ಹಾಗೂ ದೇಹದ ಭಂಗಿಯನ್ನು ಸರಿಯಾಗಿ ಕಾಪಾಡಿಕೊಳ್ಳಲು ನೆರವಾಗುವ ಪುನರ್ವಸತಿ ಪರಿಹಾರಗಳನ್ನು ಪರಿಚಯಿಸಲು ಉದ್ದೇಶಿಸಲಾಗಿದೆ. ಈ ಸೌಲಭ್ಯಗಳು ಆಸ್ಪತ್ರೆಗಳು, ಪುನರ್ವಸತಿ ಕೇಂದ್ರಗಳು ಹಾಗೂ ವಿಶೇಷ ಚಲನವಲನ ನೆರವು ಅಗತ್ಯವಿರುವವರಿಗೆ ಪ್ರಯೋಜನ ಕಾರಿಯಾಗಲಿವೆ. ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿಯ ಅಂದಾಜಿನ ಪ್ರಕಾರ, 2050ರ ವೇಳೆಗೆ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಹಿರಿಯ ನಾಗರಿಕರ ಪ್ರಮಾಣ ಶೇ.20ಕ್ಕಿಂತ ಹೆಚ್ಚಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಗುಣಮಟ್ಟದ ಚಲನವಲನ ಮತ್ತು ಪುನರ್ವಸತಿ ಸೌಲಭ್ಯಗಳ ಅಗತ್ಯ ಹೆಚ್ಚುತ್ತಿದೆ.

ಆಸ್ಟ್ರಿಚ್ ಮೊಬಿಲಿಟಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೇಣುಕೃಷ್ಣನ್ ಉನ್ನಿಕೃಷ್ಣನ್ ಮಾತನಾಡಿ, ಕಳೆದ 19 ವರ್ಷಗಳಿಂದ ಭಾರತೀಯ ಬಳಕೆದಾರರ ಅಗತ್ಯಗಳಿಗೆ ಅನುಗುಣವಾಗಿ ಚಲನವಲನ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಪ್ರೈಡ್ ಮೊಬಿಲಿಟಿಯ ಜಾಗತಿಕ ತಂತ್ರಜ್ಞಾನ ಮತ್ತು ನಮ್ಮ ಸ್ಥಳೀಯ ಪರಿಣತಿಯ ಸಂಯೋಜನೆಯಿಂದ ಬಳಕೆದಾರರಿಗೆ ಸುಧಾರಿತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಲಿದೆ. ಇದರಿಂದ ಹಿರಿಯ ನಾಗರಿಕರು ಮತ್ತು ವಿಕಲಚೇತನರು ಸ್ವಾವಲಂಬನೆಯಿಂದ, ಆರಾಮವಾಗಿ ಹಾಗೂ ಗೌರವಯುತವಾಗಿ ಬದುಕಲು ನೆರವಾಗಲಿದೆ ಎಂದರು.

ಪ್ರೈಡ್ ಮೊಬಿಲಿಟಿ ಪ್ರಾಡಕ್ಟ್ಸ್ ಕಾರ್ಪೊರೇಷನ್‌ನ ಅಂತರರಾಷ್ಟ್ರೀಯ ಮಾರಾಟ ವಿಭಾಗದ ನಿರ್ದೇಶಕ ಸೆಬಾಸ್ಟಿಯನ್ ಲಾಕೋಸ್ಟ್ ಮಾತನಾಡಿ, ಚಲನವಲನವು ಕೇವಲ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆರಳುವುದಕ್ಕೆ ಸೀಮಿತವಲ್ಲ. ಅದು ಸ್ವಾತಂತ್ರ್ಯ, ಸಮಾಜದಲ್ಲಿ ಸಕ್ರಿಯ ವಾಗಿ ಪಾಲ್ಗೊಳ್ಳುವ ಅವಕಾಶ ಮತ್ತು ಗೌರವಯುತ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಆಸ್ಟ್ರಿಚ್ ಮೊಬಿಲಿಟಿಯ ಸಹಯೋಗದೊಂದಿಗೆ ಸುಧಾರಿತ ಪುನರ್ವಸತಿ ತಂತ್ರಜ್ಞಾನವನ್ನು ಭಾರತಕ್ಕೆ ಪರಿಚಯಿಸಲು ಸಂತೋಷವಾಗುತ್ತಿದೆ ಎಂದು ತಿಳಿಸಿದರು.

ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಸಂಸ್ಥಾಪಕ ಹಾಗೂ ಅಧ್ಯಕ್ಷ ಡಾ. ಬಿ.ಎಸ್. ಅಜೈಕುಮಾರ್ ಅವರು, ವಿಶೇಷ ಅಗತ್ಯಗಳಿರುವವರು ಮತ್ತು ಹಿರಿಯ ನಾಗರಿಕರು ಸ್ವಾವಲಂಬನೆಯಿಂದ ಬದುಕಲು ಜಾಗತಿಕ ತಂತ್ರಜ್ಞಾನ ಹಾಗೂ ಸ್ಥಳೀಯ ಸೇವೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಈ ಪಾಲುದಾರಿಕೆಯು ಭಾರತದಲ್ಲಿ ಸುಧಾರಿತ ಚಲನವಲನ ತಂತ್ರಜ್ಞಾನದ ಲಭ್ಯತೆಯನ್ನು ವಿಸ್ತರಿಸುವ ಜೊತೆಗೆ, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸ್ವಾವಲಂಬನೆ, ಆತ್ಮವಿಶ್ವಾಸ ಹಾಗೂ ಜೀವನದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

# ಭೀಕರ ಅಪಘಾತ–ಮೂವರಿಗೆ ಗಂಭೀರ ಗಾಯ

## ಚಾಲಕನ ನಿಯಂತ್ರಣ ತಪ್ಪಿ ಅಂಗಡಿಗೆ ನುಗ್ಗಿದ ಮಾರುತಿ ವ್ಯಾನ್

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಚಿಂತಾಮಣಿ ಶ್ರೀನಿವಾಸಪುರ ರಸ್ತೆಯ ಭೂರಗಮಾಕಲಹಳ್ಳಿ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದ ಮುಂಭಾಗ ಬುಧವಾರ ಬೆಳಿಗ್ಗೆ ಮಾರುತಿ ವ್ಯಾನ್ ವೊಂದು ದ್ವಿಚಕ್ರ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದು, ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಅಂಗಡಿಗೆ ನುಗ್ಗಿದ ಪರಿಣಾಮ ಒಟ್ಟು ನಾಲ್ವರು ಗಾಯಗೊಂಡಿದ್ದು, ಕಾರು ಮತ್ತು ದ್ವಿಚಕ್ರ ವಾಹನ ಜಖಂಗೊಂಡಿವೆ.



ಚಿಂತಾಮಣಿ ಶ್ರೀನಿವಾಸ ಪುರ ರಾಷ್ಟ್ರೀಯತ ಹೆದ್ದಾರಿಯ ಮುಖ್ಯ ರಸ್ತೆಯಿಂದ ಮಾರುತಿ ಕಲ್ಯಾಣ ಮಂಟಪದ ಕಡೆಗೆ ತೆರಳುತ್ತಿದ್ದ ದ್ವಿಚಕ್ರ ವಾಹನಕ್ಕೆ ಮಾರುತಿ ವ್ಯಾನ್ ಡಿಕ್ಕಿ ಹೊಡೆದಿದೆ. ಬಳಿಕ ನಿಯಂತ್ರಣ ತಪ್ಪಿದ ವ್ಯಾನ್ ರಸ್ತೆ ಬದಿಯ ಅಂಗಡಿಗೆ ನುಗ್ಗಿದೆ. ಘಟನೆಯಲ್ಲಿ ವ್ಯಾನ್ ಚಾಲಕ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಪಟ್ಟಣದ ಜಾಫರ್ ಸಾಧಿಕ್ 50 ಅವರ ಕೈ ಮತ್ತು ಬೆರಳುಗಳಿಗೆ ತೀವ್ರ ಗಾಯಗಳಾಗಿವೆ. ಮಾರುತಿ ವ್ಯಾನ್‌ನ ಮುಂಭಾಗದ ಸೀಟಿನಲ್ಲಿ ಕುಳಿತಿದ್ದ ಅವರ ತಾಯಿ ಹಬೀಬ್ ಉನ್ನೀಸಾ 70 ಅವರ ಕೈ ಮುರಿದಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಚಿಂತಾಮಣಿ ನಗರದ ಎನ್.ಅರ್.ಬಡಾವಣೆಯ ನಿವಾಸಿ ಬಿಜೆಪಿ ಕಾರ್ಯಕರ್ತೆ ಗೌತಮಿ ಅವರ ತಲೆಗೆ ಪೆಟ್ಟಾಗಿದ್ದು, ಕಾಲು ಸಹ ಮುರಿದಿದೆ. ಇನ್ನೂ ವ್ಯಾನ್ ರಸ್ತೆಯ ಪಕ್ಕದ ಅಂಗಡಿಗೆ ನುಗ್ಗಿದ ಪರಿಣಾಮ ಅಂಗಡಿ ಮಾಲೀಕರಾದ ನಾಗಮಣಿ ಅವರ ಕಾಲಿಗೂ ತೀವ್ರ ಗಾಯವಾಗಿದೆ.

ಗಂಭೀರವಾಗಿ ಗಾಯಗೊಂಡ ಹಬೀಬ್ ಉನ್ನೀಸಾ, ಜಾಫರ್ ಸಾಧಿಕ್ ಮತ್ತು ಗೌತಮಿ ಅವರಿಗೆ ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ. ಗಾಯ ಗೊಂಡ ಅಂಗಡಿ ಮಾಲೀಕರಾದ ನಾಗಮಣಿ ಚಿಂತಾಮಣಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಾಫರ್ ಸಾಧಿಕ್ ಅವರು ಚಿಕ್ಕಬಳ್ಳಾಪುರದಿಂದ ತಮ್ಮ ತಾಯಿ ಹಬೀಬ್ ಉನ್ನೀಸಾ ಅವರನ್ನು ಮಾರುತಿ ವ್ಯಾನ್ ನಲ್ಲಿ ಶ್ರೀನಿವಾಸಪುರ ಪಟ್ಟಣಕ್ಕೆ ಕರೆದೊಯ್ಯುತ್ತಿದ್ದರು ಎನ್ನಲಾಗಿದೆ. ಇತ್ತ ದ್ವಿಚಕ್ರ ವಾಹನ ಸವಾರರಾದ ಗೌತಮಿ ಅವರು ಬಿಜೆಪಿ ಕಾರ್ಯಕರ್ತೆಯಾಗಿದ್ದು, ಶ್ರೀನಿವಾಸಪುರ ರಸ್ತೆಯ ಭೂರಗಮಾಕಲಹಳ್ಳಿ ಗ್ರಾಮದ ಶ್ರೀ ಮಾರುತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಭೆಗೆ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ.

ಸ್ಥಳಕ್ಕೆ 112 ಪೊಲೀಸರು ಭೇಟಿ ನೀಡಿದ್ದರು. ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿಡ್ಲಘಟ್ಟದಲ್ಲಿ ವಿಭಾಗ ಮಟ್ಟದ ವಾಲಿಬಾಲ್ ಪಂದ್ಯಾವಳಿ

## ಕ್ರೀಡೆ ಜಾತಿ–ಧರ್ಮ ಮೀರಿ ಸಾಮರಸ್ಯ ಬೆಸೆಯುತ್ತದೆ ಡಾ.ಮನುಶ್ರೀರಾಜೀವ್




**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಶಿಡ್ಲಘಟ್ಟ:** ಸಾಂಪ್ರದಾಯಿಕ ಮತ್ತು ಸಾಮಾನ್ಯ ಕ್ರೀಡೆಗಳು ಜಾತಿ ಧರ್ಮ ಮತವನ್ನು ಮೀರಿ, ರಾಜ್ಯ ದೇಶದ ಗಡಿ ದಾಟಿ ಎಲ್ಲರನ್ನೂ ಒಂದುಗೂಡಿಸುವ, ಸಾಮರಸ್ಯ ಬೆಸೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಜ್ಞಾನಜ್ಯೋತಿ ಪ್ರೌಢಶಾಲೆ ಮತ್ತು ಪಿಯು ಕಾಲೇಜಿನ ಪ್ರಿನ್ಸಿಪಲ್ ಡಾ.ಮನುಶ್ರೀರಾಜೀವ್ ಅಭಿಪ್ರಾಯಪಟ್ಟರು.

ರಾಜ್ಯ ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜ್ಞಾನ ಜ್ಯೋತಿ ಪ್ರೌಢಶಾಲೆ ಮತ್ತು ಪಿಯು ಕಾಲೇಜು ಆಶ್ರಯದಲ್ಲಿ ತಾಲೂಕಿನ ಜ್ಞಾನ ಜ್ಯೋತಿ ವಿದ್ಯಾಸಂಸ್ಥೆ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 14 ವರ್ಷದೊಳಗಿನ ಬಾಲಕ ಬಾಲಕಿಯರ ಬೆಂಗಳೂರು ವಿಭಾಗೀಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕ್ರೀಡೆಗಳಲ್ಲಿ ಸೋಲು ಗೆಲುವು ಮುಖ್ಯವಲ್ಲ. ಸೋಲು ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮತ್ತು ಕ್ರೀಡಾ ಮನೋಭಾವ ಮುಖ್ಯವಾಗಬೇಕು ಅದುವೆ ಗೆಲುವು. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ನಾಯಕತ್ವದ ಗುಣಗಳು ಬೆಳೆಯುತ್ತವೆ. ದೈಹಿಕ ಮತ್ತು ಮಾನಸಿಕ ಸದೃಢತೆ ಹೆಚ್ಚುತ್ತದೆ, ಕ್ರಿಯಾಶೀಲತೆ ಇನ್ನಷ್ಟು ಹೆಚ್ಚುತ್ತದೆ ಎಂದು ಹೇಳಿದರು.

ಬೆಂಗಳೂರು ವಿಭಾಗ ವ್ಯಾಪ್ತಿಯ ಕೋಲಾರ, ತುಮಕೂರು, ದಾವಣಗೆರೆ, ಬೆಂಗಳೂರು ಉತ್ತರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಶಿವಮೊಗ್ಗ, ಮಧುಗಿರಿ, ಬೆಂಗಳೂರು ನಗರ ಸೇರಿ 12 ಜಿಲ್ಲೆಗಳಿಂದ ಬಾಲಕ ಬಾಲಕಿಯರ 24 ತಂಡಗಳು ಭಾಗವಹಿಸಿದ್ದು ನಮ್ಮ ವಿದ್ಯಾಸಂಸ್ಥೆಯಲ್ಲಿ ವಿಭಾಗೀಯ ಮಟ್ಟದ ಕ್ರೀಡಾ ಕೂಟ ನಡೆಸಲು ಅವಕಾಶ ಮಾಡಿಕೊಟ್ಟ ಇಲಾಖೆ ಹಾಗೂ ಸಂಬಂಧಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದ ಅವರು, ಕೀಡಾ ಕೂಟದಲ್ಲಿ ಭಾಗವಹಿಸಿದ ಎಲ್ಲ ಮಕ್ಕಳು ನಮ್ಮವರೇ ಎಂದು ಭಾವಿಸಿ ಯಾವುದೆ ಅಡಚಣೆ, ತಾರತಮ್ಯ ಇಲ್ಲದೆ ಕ್ರೀಡಾ ಕೂಟ ನಡೆಯುವಂತಾಗಲಿ ಎಂದು ಆಶಿಸಿದರು.

ಬಿಇಒ ಪಿ.ಸ್ವಾಮಿ, ಡಿಡಿಪಿಐ ಕಚೇರಿಯ ರಮೇಶ್, ಜಿಲ್ಲಾ ದೈಹಿಕ ಶಿಕ್ಷಕ ಅಧೀಕ್ಷಕ ರವಿಕುಮಾರ್, ದೈಹಿಕ ಶಿಕ್ಷಕರ ಸಂಘದ ರಾಜ್ಯ ಖಜಾಂಚಿ ಡಿ.ವಿ.ಬಾಲರಾಜ್, ಅಧ್ಯಕ್ಷ ಪಿ.ಸಿ.ಮಾರುತಿ, ಜ್ಞಾನ ಜ್ಯೋತಿ ಶಾಲೆಯ ಮುಖ್ಯಶಿಕ್ಷಕ ಅಂಜನಮೂರ್ತಿ ಇನ್ನಿತರರು ಹಾಜರಿದ್ದರು.

ವಿಭಾಗೀಯ ಮಟ್ಟದ ವಾಲಿಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಕೋಲಾರ ಜಿಲ್ಲಾ ಬಾಲಕರ ತಂಡದಲ್ಲಿ 14 ವರ್ಷ ಮೇಲ್ಪಟ್ಟ ವಿದ್ಯಾರ್ಥಿಯೊಬ್ಬ ಭಾಗವಹಿಸಿದ್ದನ್ನು ಪ್ರಶ್ನಿಸಿ ಕ್ರೀಡಾಕೂಟದ ಆಯೋಜಕರು ಮತ್ತು ತೀರ್ಪುಗಾರರೊಂದಿಗೆ ರಾಮನಗರ, ಶಿವಮೊಗ್ಗದ ವಿದ್ಯಾರ್ಥಿಗಳು ಹಾಗೂ ಆ ತಂಡದ ಮುಖ್ಯಸ್ಥ ದೈಹಿಕ ಶಿಕ್ಷಕರು ವಾಗ್ವಾದಕ್ಕೆ ಇಳಿದರು. ಕ್ರೀಡಾಕೂಟದ ಆರಂಭದಲ್ಲೆ ಆಪೇಕ್ಷಣೆ ಸಲ್ಲಿಸಬೇಕಿತ್ತು ಎನ್ನುವ ವಿಚಾರದಲ್ಲಿ ಕೆಲ ಕಾಲ ಮಾತಿನ ಚಕಮುಕಿ ನಡೆದು ಕೆಲ ಕಾಲ ಪಂದ್ಯಾವಳಿ ನಡೆಯದೆ ಸ್ಥಗಿತಗೊಂಡಿತು.

ಅಂತಿಮವಾಗಿ ನಿಯಮ ಮೀರಿ ಕ್ರೀಡಾಪಟು ಆಡಿದ್ದು ಸಾಭೀತಾದ ಹಿನ್ನಲೆಯಲ್ಲಿ ಕೋಲಾರ ಜಿಲ್ಲೆ ಬಾಲಕರ ತಂಡವನ್ನು ಪಂದ್ಯಾವಳಿಯಿಂದ ಹೊರ ಹಾಕುವ ನಿರ್ಧಾರವನ್ನು ಕ್ರೀಡಾ ಕೂಟದ ಆಯೋಜಕರು ತೀರ್ಮಾನಿಸಿದರು. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ವರದಿ ನೀಡುವುದಾಗಿ ಚಿಕ್ಕಬಳ್ಳಾಪುರ ಜಿಲ್ಲಾ ದೈಹಿಕ ಶಿಕ್ಷಕ ಅಧೀಕ್ಷಕ ರವಿಕುಮಾರ್ ಕ್ರೀಡಾಪಟುಗಳಿಗೆ ಸ್ಪಷ್ಟಪಡಿಸಿದರು.

ನಂತರ ಪರಿಸ್ಥಿತಿ ತಿಳಿಯಾಯಿತು. ಶಿಡ್ಲಘಟ್ಟ ತಾಲೂಕು ಜಂಗಮಕೋಟೆ ಕ್ರಾಸ್‌ನ ಜ್ಞಾನಜ್ಯೋತಿ ಪ್ರೌಢಶಾಲೆ ಮತ್ತು ಪಿಯು ಕಾಲೇಜಿನಲ್ಲಿ ನಡೆದ ಬೆಂಗಳೂರು ವಿಭಾಗೀಯ ಮಟ್ಟದ ವಾಲೀಬಾಲ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಪ್ರಿನ್ಸಿಪಲ್ ಡಾ.ಮನುಶ್ರೀ ಬಹುಮಾನ ವಿತರಿಸಿದರು.

# ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಬೆಂಕಿ

## ಗರುಡ ಮಾರ್ಟ್‌ಗೆ ಭಾರೀ ಹಾನಿ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಚಿಂತಾಮಣಿ ಭಾರತದ ಗೃಹೋಪಯೋಗಿ ಉತ್ಪನ್ನಗಳ ವಲಯದಲ್ಲಿ ವೇಗವಾಗಿ ಬೆಳೆಯುತ್ತಿರುವ ಸಂಸ್ಥೆಗಳಲ್ಲಿ ಒಂದಾದ ಗರುಡ ಮಾರ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಚಿಂತಾಮಣಿ ತಾಲ್ಲೂಕು, ಕೈವಾರ ಹೋಬಳಿ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶ, ಮಸ್ತೇನಹಳ್ಳಿ ಗ್ರಾಮ ಸರ್ವೇ ನಂ. 79/1 ಮತ್ತು 80/2, ಹಂತ 1, ದಲ್ಲಿ ತನ್ನ ಕೈಗಾರಿಕೆಯನ್ನು ಸ್ಥಾಪಿಸಿದ್ದು ಸದರಿ ಕೈಗಾರಿಕೆಗೆ ಬುಧುವಾರ ಬೆಳಿಗಿನ ಜಾವ 6–30 ರಲ್ಲಿ ಅಕಸ್ಮಿಕ ಬೆಂಕಿ ಬಿದ್ದು ಸಂಪೂರ್ಣ ಸುಟ್ಟು ಹೋಗಿ ಲಕ್ಷಾಂತರ ರೂ ನಷ್ಟ ಉಂಟಾಗಿರುವ ಘಟನೆ ನಡೆದಿದೆ.

2017ರಲ್ಲಿ ಸ್ಥಾಪನೆಯಾಗಿ ಗ್ರಾಹಕ ಸ್ನೇಹಿ ಸೇವೆ, ಗುಣಮಟ್ಟ ಮತ್ತು ನವೀನ ತಂತ್ರಜ್ಞಾನಕ್ಕೆ ಆದ್ಯತೆ ನೀಡುತ್ತಾ ಮುನ್ನಡೆಯುತ್ತಿದ್ದು ಕಂಪನಿ ಕರ್ನಾಟಕದ ಕೈಗಾರಿಕಾ ಪ್ರದೇಶವಾದ ಮಸ್ತೇನಹಳ್ಳಿ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ತನ್ನ ಕೇಂದ್ರ ಕಚೇರಿಯನ್ನು ಹೊಂದಿರುವ ಈ ಸಂಸ್ಥೆಯು, ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಗುಣಮಟ್ಟದ ಹಾಗೂ ಪರಿಸರ ಸ್ನೇಹಿ ಉತ್ಪನ್ನಗಳ ತಯಾರಿಕೆ ಮತ್ತು ಮಾರುಕಟ್ಟೆ ವಿತರಣೆಯಲ್ಲಿ ತನ್ನದೇ ಆದ ಛಾಪು ಮೂಡಿಸುವ ಗುರಿಯನ್ನು ಹೊಂದಿದ್ದ ಕಂಪನಿಗೆ ಬೆಂಕಿ ಬಿದ್ದಿದೆ.

ವಿಶ್ವಮಟ್ಟದ ತಂತ್ರಜ್ಞಾನ, ನವೀನ ಉತ್ಪಾದನಾ ವ್ಯವಸ್ಥೆ, ಡಿಜಿಟಲ್ ತಂತ್ರಜ್ಞಾನ ಮತ್ತು ನುರಿತ ಮಾನವ ಸಂಪನ್ಮೂಲದ ನೆರವಿನಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಂಸ್ಥೆಯಾಗುವುದು ಗರುಡ ಮಾರ್ಟ್ನ ದೂರದೃಷ್ಟಿಯಾಗಿದ್ದ ಕಂಪನಿಗೆ ಅಕಸ್ಮಿಕ ಬೆಂಕಿ ಬಿದ್ದು ಎಲ್ಲವೂ ಸುಟ್ಟು ಭಸ್ಮವಾಗಿದೆ.

ಸಂಸ್ಥೆಯು ನೀಡಿರುವ ಅಂಕಿಅಂಶಗಳ ಪ್ರಕಾರ, ಗರುಡ ಮಾರ್ಟ್ 5 ಲಕ್ಷಕ್ಕೂ ಹೆಚ್ಚು ಗ್ರಾಹಕರನ್ನು ತಲುಪಿದ್ದು, ದಕ್ಷಿಣ ಭಾರತದಲ್ಲಿ 1200ಕ್ಕೂ ಹೆಚ್ಚು ಡೀಲರ್‌ಗಳ ಜಾಲವನ್ನು ಹೊಂದಿದೆ ಎನ್ನಲಾಗಿದೆ.

ಗ್ರಾಹಕರ ವಿಶ್ವಾಸ, ಗುಣಮಟ್ಟದ ಉತ್ಪನ್ನಗಳು, ನಿರಂತರ ಸುಧಾರಣೆ ಮತ್ತು ವಿಸ್ತರಣೆಯ ಯೋಜನೆಗಳೊಂದಿಗೆ ಗರುಡ ಮಾರ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಗೃಹೋಪಯೋಗಿ ಉತ್ಪನ್ನಗಳ ಕ್ಷೇತ್ರದಲ್ಲಿ ತನ್ನ ಬೆಳವಣಿಗೆಯ ಪಯಣವನ್ನು ಮುಂದುವರಿಸುತ್ತಿದ್ದ ಸಂದರ್ಭಧಲ್ಲಿ ಇಂದು ಸದರಿ ಕಾರ್ಖಾನೆಗೆ ಬೆಂಕಿ ಬಿದ್ದು ದೊಡ್ಡ ಅಘಾತ ಸಂಭವಿಸಿದೆ.

ಇನ್ನು ಬೆಂಕಿಯನ್ನು ನಂದಿಸಲು ಚಿಕ್ಕಬಳ್ಳಾಪುರ ಪ್ರಭಾರ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಹಾಲಸಿದ್ಧ ಮೇತ್ರಿ, ಚಿಂತಾಮಣಿಯ ಅಗ್ನಿ ಶಾಮಕ ದಳದ ಅಧಿಕಾರಿಗಳಾಧ ಜಯನಾಯಕ್ ಲೋಕೇಶ್, ಶಿಡ್ಲಘಟ್ಟ ರಾಮಾಂಜಿ ಸೇರಿದಂತೆ ಹಲವಾರು ಅಗ್ನಿ ಶಾಮಕ ದಳದ ಸಿಬ್ಬಂದಿ ಮತ್ತು ಸಮೀಪದ ಗ್ರಾಮಸ್ಥರು ಹಲವು ಗಂಟೆಗಳ ಹರಸಾಹಸ ಪಟ್ಟ ಘಟನೆ ನಡೆದಿದೆ.

ಇನ್ನು ಆವರಣದಲ್ಲಿದ್ದ ಹಲವಾರು ವಾಹನಗಳನ್ನು ಯುವಕರ ತಂಡ ಮುನ್ನುಗ್ಗಿ ಸದರಿ ವಾಹನಗಳನ್ನು ರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

# ನ.1ರ ಕನ್ನಡ ರಾಜ್ಯೋತ್ಸವ ಅರ್ಥಪೂರ್ಣ ಆಚರಣೆ–ಜಿ.ಪ್ರಭು




**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ನವೆಂಬರ್ 1 ರಂದು ನಡೆಯುವ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಭ್ರಮ ಸಡಗರದೊಂದಿಗೆ ರಾಷ್ಟ್ರೀಯ ಹಬ್ಬಗಳ ಮಾದರಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಕುರಿತ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳ, ಸಾಹಿತಿಗಳ ಸಲಹೆ ಸೂಚನೆಗಳನ್ನು ಆಲಿಸಿ ಮಾತನಾಡಿದರು.

ಈ ಬಾರಿ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದ್ದು, ಅಂದು ವೇದಿಕೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ, ನಾಡಗೀತೆ, ವಿದ್ಯಾರ್ಥಿಗಳಿಂದ ಕನ್ನಡದ ಅಸ್ಮಿತೆ ಸಾರುವ ಗೀತೆಗಳಿಗೆ ಸಾಮೂಹಿಕ ನೃತ್ಯ, ಗೌರವ ವಂದನೆ, ಸಾಧಕರಿಗೆ ಸನ್ಮಾನ, ಪಥ ಸಂಚಲನ, ಪೊಲೀಸ್ ಕವಾಯತು ಕಾರ್ಯಕ್ರಮಗಳನ್ನು ಎಂದಿನಂತೆಯೇ ಆಯೋಜಿಸಲಾಗುವುದು.

ಅಲ್ಲದೆ ನಗರದ ಉಪವಿಭಾಗಾಧಿಕಾರಿ ಕಚೇರಿಯಿಂದ ಬಿ.ಬಿ.ರಸ್ತೆಯ ಮೂಲಕ ಕ್ರೀಡಾಂಗಣದವರೆಗೆ ಸ್ತಬ್ದ ಚಿತ್ರಗಳು ಹಾಗೂ ವಿವಿಧ ಕಲಾ ತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಗುವುದು. ಸ್ಥಳೀಯ ಸಾಹಿತಿಗಳನ್ನು ಒಳಗೊಂಡಂತೆ ಪ್ರಮುಖ ಕನ್ನಡ ಸಾಹಿತಿಗಳ ಛಾಯಾಚಿತ್ರಗಳನ್ನು ಹಾಗೂ ಅವರ ಸಂದೇಶಗಳ ಫಲಕಗಳನ್ನು ಫ್ಲೆಕ್ಸ್ ನಗರದ ಪ್ರಮುಖ ವೃತ್ತಗಳಲ್ಲಿ ಅಳವಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ವೇದಿಕೆ ಸಿದ್ಧತೆ, ಅಲಂಕಾರ, ಆಸನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಆಹ್ವಾನ ಪತ್ರಿಕೆಗಳ ಮುದ್ರಣ ಮತ್ತು ವಿತರಣೆ, ಆಂಬುಲೆನ್ಸ್ ವ್ಯವಸ್ಥೆ, ಕಾರ್ಯಕ್ರಮ ನಿರ್ವಹಣೆ, ನಿರೂಪಣೆ, ಕ್ರೀಡಾಂಗಣ ಸ್ವಚ್ಛತೆ ಇನ್ನಿತರೆ ಸಿದ್ಧತಾ ಕಾರ್ಯಗಳನ್ನು ಸಂಬಂಧ ಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಮಾಡಿ ಈ ಎಲ್ಲಾ ಕಾರ್ಯಗಳನ್ನು ಸಮರ್ಪಕವಾಗಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕನ್ನಡ ಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜಿಲ್ಲಾ ಕೇಂದ್ರದಲ್ಲಿ ಅತ್ಯಂತ ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ಕನ್ನಡ ಭವನದಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವದ ನವೆಂಬರ್ 1ರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸರ್ಕಾರಿ ಕಚೇರಿಗಳ ಕಟ್ಟಡಗಳಿಗೆ ಎರಡು ದಿನಗಳ ವಿದ್ಯುತ್ ದೀಪಾಲಂಕಾರಕ್ಕೆ ಸೂಚನೆ ನೀಡಲಾಗಿದೆ.

ಸರ್ಕಾರಿ ಶಾಲೆಗಳು ಸೇರಿದಂತೆ ಜಿಲ್ಲೆಯ ಎಲ್ಲಾ ಖಾಸಗಿ ಶಾಲೆಗಳಲ್ಲೂ ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಸೂಚಿಸಲಾಗಿದೆ ಎಂದರು. ನವೆಂಬರ್ 01 ರಂದು ನಡೆಯಲಿರುವ ಎಲ್ಲ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಎಲ್ಲಾ ಕನ್ನಡಪರ ಸಂಘಟನೆಗಳ ಮುಖ್ಯಸ್ಥರು ಹಾಗೂ ಪದಾಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿಗಳು ಈ ವೇಳೆ ಆಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಅರಪ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್, ಉಪವಿಭಾಗಾಧಿಕಾರಿ ಡಿ.ಹೆಚ್.ಅಶ್ವಿನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಎಂ. ರವಿಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಪ್ರೋ.ಕೋಡಿರಂಗಪ್ಪ, ಕಸಾಪ ಸದಸ್ಯರು, ವಿವಿಧ ಕನ್ನಡಪರ ಸಂಘಟನೆಗಳ ಮುಖ್ಯಸ್ಥರು, ಸದಸ್ಯರು, ಪದಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

# ದಸರಾ ರಜೆ ವಿಚಾರಕ್ಕೆ ರಣಕಹಳೆ

## ಖಾಸಗಿ ಕಾಲೇಜುಗಳ ವಿರುದ್ಧ ಎಬಿವಿಪಿ ಆಕ್ರೋಶ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ದಸರಾ ಹಬ್ಬಕ್ಕೆ ಅಕ್ಟೋಬರ್ 10ರಿಂದ 20ರವರೆಗೆ ಮಧ್ಯಂತರ ರಜೆ ನೀಡುವಂತೆ ಶಿಕ್ಷಣ ಇಲಾಖೆ ಸೂಚಿಸಿದ್ದರೂ, ಕೆಲವು ಖಾಸಗಿ ಕಾಲೇಜುಗಳು ರಜೆ ನೀಡದೆ ತರಗತಿಗಳನ್ನು ನಡೆಸುತ್ತಿವೆ ಎಂಬ ಆರೋಪ ಕೇಳಿಬಂದಿದೆ.

ಇದನ್ನು ಖಂಡಿಸಿ ಚಿಕ್ಕಬಳ್ಳಾಪುರದಲ್ಲಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ಸಂತ ಜೋಸೆಫ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಕಾರ್ಯಕರ್ತರ ನಡುವೆ ವಾಗ್ವಾದ ನಡೆದಿದೆ.

ದಸರಾ ಹಬ್ಬಕ್ಕೆ ರಜೆ ನೀಡುವಂತೆ ಆಗ್ರಹಿಸಿ ಅಖಾಡಕ್ಕಿಳಿದ ಎಬಿವಿಪಿ ಕಾರ್ಯಕರ್ತರು. ಒಂದೆಡೆ ವಿದ್ಯಾರ್ಥಿಗಳ ರಜೆಯ ಹಕ್ಕಿನ ಬಗ್ಗೆ ಧ್ವನಿ ಎತ್ತಿದ ಸಂಘಟನೆ. ಮತ್ತೊಂದೆಡೆ ಮಕ್ಕಳ ಭವಿಷ್ಯದ ಹೆಸರಿನಲ್ಲಿ ಸಮರ್ಥನೆ ನೀಡಿದ ಖಾಸಗಿ ಕಾಲೇಜು ಆಡಳಿತ ಮಂಡಳಿ. ಈ ಎರಡರ ನಡುವಿನ ಸಂಘರ್ಷಕ್ಕೆ ಚಿಕ್ಕಬಳ್ಳಾಪುರ ನಗರ ಸಾಕ್ಷಿಯಾಗಿದೆ.

ಶಿಕ್ಷಣ ಇಲಾಖೆಯ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಅಕ್ಟೋಬರ್ 10ರಿಂದ 20ರವರೆಗೆ ಮಧ್ಯಂತರ ರಜೆ ನೀಡಬೇಕೆಂಬ ಸೂಚನೆ ಇದೆ. ಆದರೆ ಜಿಲ್ಲೆಯ ಹಲವು ಖಾಸಗಿ ಪದವಿ ಪೂರ್ವ ಕಾಲೇಜುಗಳು ರಜೆ ಘೋಷಿಸದೆ ತರಗತಿಗಳನ್ನು ನಡೆಸುತ್ತಿವೆ ಎಂಬ ಆರೋಪ ಕೇಳಿಬಂದಿದೆ.

ಇದರಿಂದ ಆಕ್ರೋಶಗೊಂಡ ಎಬಿವಿಪಿ ಕಾರ್ಯಕರ್ತರು ನಗರದ ವಿವಿಧ ಖಾಸಗಿ ಕಾಲೇಜುಗಳಿಗೆ ಭೇಟಿ ನೀಡಿ, ಆಡಳಿತ ಮಂಡಳಿಗಳ ಜೊತೆ ಮಾತುಕತೆ ನಡೆಸಿದ್ದಾರೆ.

ವಿದ್ಯಾರ್ಥಿಗಳಿಗೆ ದಸರಾ ರಜೆ ನೀಡುವಂತೆ ಮನವಿ ಮಾಡಿದ್ದಾರೆ. ಆದರೆ ಎಬಿವಿಪಿ ಕಾರ್ಯಕರ್ತರ ಮನವಿಗೆ ಕೆಲವು ಕಾಲೇಜು ಆಡಳಿತ ಮಂಡಳಿಗಳು ಸೊಪ್ಪು ಹಾಕಿಲ್ಲ ಎನ್ನಲಾಗಿದೆ.

ಇದರಿಂದ ಕೆರಳಿದ ಕಾರ್ಯಕರ್ತರು ಕಾಲೇಜು ಆವರಣದಲ್ಲೇ ಪ್ರತಿಭಟನೆ ನಡೆಸಿದ್ದಾರೆ. ಇದೇ ವೇಳೆ ಸಂತ ಜೋಸೆಫ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಎಬಿವಿಪಿ ಕಾರ್ಯಕರ್ತರ ನಡುವೆ ತೀವ್ರ ವಾಗ್ವಾದ ನಡೆದಿದೆ.

ಇನ್ನು ಎಬಿವಿಪಿ ವಿರುದ್ಧವೇ ಗಂಭೀರ ಆರೋಪ ಮಾಡಿರುವ ಸಂತ ಜೋಸೆಫ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಕ್ರಿಸ್ಮಸ್ ಹೊರತುಪಡಿಸಿ ಬೇರೆ ರಜೆಗಳನ್ನು ನೀಡಿಲ್ಲ ಎಂದು ಹೇಳಿದೆ. ವಿದ್ಯಾರ್ಥಿಗಳ ಪೋಷಕರು ಮಕ್ಕಳ ಭವಿಷ್ಯ ರೂಪಿಸುವ ಉದ್ದೇಶದಿಂದ ಕಾಲೇಜಿಗೆ ಸೇರಿಸಿದ್ದಾರೆ.

ಆದರೆ ಎಬಿವಿಪಿ ಕಾರ್ಯಕರ್ತರು ಜಾತಿ–ಧರ್ಮದ ವಿಚಾರಗಳನ್ನು ತಂದು ಜನರ ನಡುವೆ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಹಿಂತವರು ದೇಶಕ್ಕೆ ಪೀಡೆಗಳು ಎಂದು ಆರೋಪಿಸಿದೆ. ಇನ್ನೊಂದೆಡೆ, ಮಧ್ಯಂತರ ರಜೆ ವಿಚಾರದಲ್ಲಿ ಶಿಕ್ಷಣ ಇಲಾಖೆಯೂ ಖಾಸಗಿ ಕಾಲೇಜುಗಳಿಗೆ ಎಚ್ಚರಿಕೆ ನೀಡಿದೆ.

2026–27ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಂತೆ ಮಧ್ಯವಾರ್ಷಿಕ ಪರೀಕ್ಷೆಗಳು ಮುಗಿದಿದ್ದು, ಅಕ್ಟೋಬರ್ 10ರಿಂದ 20ರವರೆಗೆ ಕಡ್ಡಾಯವಾಗಿ ಮಧ್ಯಂತರ ರಜೆ ಘೋಷಿಸುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪಂಡರಿನಾಥ್ ಸೂಚನೆ ನೀಡಿದ್ದಾರೆ.

ಇಲಾಖೆಯ ಸೂಚನೆ ಪಾಲಿಸದ ಕಾಲೇಜುಗಳ ಪ್ರಾಂಶುಪಾಲರೇ ನೇರ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ. ಆದರೂ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ರಜೆ ನೀಡುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಒಟ್ಟಿನಲ್ಲಿ, ದಸರಾ ರಜೆ ವಿಚಾರ ಈಗ ಚಿಕ್ಕಬಳ್ಳಾಪುರದಲ್ಲಿ ಖಾಸಗಿ ಕಾಲೇಜುಗಳು ಮತ್ತು ಎಬಿವಿಪಿ ನಡುವಿನ ಸಂಘರ್ಷಕ್ಕೆ ಕಾರಣವಾಗಿದೆ. ಶಿಕ್ಷಣ ಇಲಾಖೆಯ ಸೂಚನೆ, ವಿದ್ಯಾರ್ಥಿಗಳ ರಜೆಯ ಬೇಡಿಕೆ ಹಾಗೂ ಕಾಲೇಜು ಆಡಳಿತ ಮಂಡಳಿಗಳ ನಿಲುವಿನ ನಡುವೆ ಅಂತಿಮವಾಗಿ ಗೆಲ್ಲೋರು ಯಾರು. ಇಲಾಖೆಯ ಎಚ್ಚರಿಕೆಗೆ ಖಾಸಗಿ ಕಾಲೇಜುಗಳು ಮಣಿಯುತ್ತವೆಯೇ ಎಂಬುದನ್ನು ಕಾದು ನೋಡಬೇಕಿದೆ.

# ಮೈತ್ರಿ ಅಭ್ಯರ್ಥಿ ಗೆಲುವಿಗೆ ಕಾರ್ಯಕರ್ತರ ಒಗ್ಗಟ್ಟಿನ ಪ್ರಯತ್ನ

**ಸ್ಕಂದಗಿರಿ ವಾಣಿ ಸುದ್ದಿಜಾಲ**




**ಚಿಕ್ಕಬಳ್ಳಾಪುರ:** ಆಗ್ನೇಯ ಪದವೀಧರರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಕೆ.ಎಂ. ಸುರೇಶ್ ಅವರ ಪರವಾಗಿ ಇಂದು ಬಾಗೇಪಲ್ಲಿಯಲ್ಲಿ ಆಯೋಜಿಸಲಾಗಿದ್ದ ಮತದಾರರು ಹಾಗೂ ಪದವೀಧರರ ಸಭೆಯಲ್ಲಿ ಭಾಗವಹಿಸಿ, ನಮ್ಮ ಅಭ್ಯರ್ಥಿಯ ಗೆಲುವಿಗಾಗಿ ಮತದಾರರಲ್ಲಿ ಮನವಿ ಮಾಡಲಾಯಿತು.

ಪದವೀಧರರ ಧ್ವನಿಗೆ ಶಕ್ತಿ ತುಂಬಲು, ಅಭಿವೃದ್ಧಿ ಮತ್ತು ಜನಪರ ಸೇವೆಗೆ ಬಲ ನೀಡಲು ಎನ್‌ಡಿಎ ಅಭ್ಯರ್ಥಿ ಕೆ.ಎಂ. ಸುರೇಶ್ ಅವರನ್ನು ಬೆಂಬಲಿಸಿ, ಆಗ್ನೇಯ ಪದವೀಧರರ ಕ್ಷೇತ್ರದ ಎಲ್ಲಾ ಅರ್ಹ ಮತದಾರರು ಒಂದಾಗಿ, ತಮ್ಮ ಅಮೂಲ್ಯ ಮತವನ್ನು ಕೆ.ಎಂ. ಸುರೇಶ್ ಅವರಿಗೆ ನೀಡಿ, ಅವರನ್ನು ಭರ್ಜರಿ ಬಹುಮತದಿಂದ ಗೆಲ್ಲಿಸಬೇಕೆಂದು ಆತ್ಮೀಯವಾಗಿ ಮತ್ತೊಮ್ಮೆ ಈ ಮೂಲಕ ಮನವಿ ಮಾಡುತ್ತೇನೆ. ಈ ಸಂದರ್ಭದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಪದವೀಧರ ಮತದಾರರು ಉಪಸ್ಥಿತರಿದ್ದರು.

# ಗೌರಿಬಿದನೂರಿನಲ್ಲಿ ಕುಟುಂಬ ರಾಜಕಾರಣ ಮುನ್ನೆಲೆಗೆ–ಟಿಕೆಟ್‌ಗಾಗಿ ಪೈಪೋಟಿ

**ಅಶ್ವತ್ಥ**
**ಸಂ.ಕ ಸಮಾಚಾರ, ಗೌರಿಬಿದನೂರು**

ಜಿ.ಪಂ. ಮತ್ತು ತಾ.ಪಂ. ಕ್ಷೇತ್ರಗಳ ಮೀಸಲಾತಿ ಪ್ರಕಟವಾದ ಬಳಿಕ ತಾಲೂಕಿನಲ್ಲಿ ರಾಜಕೀಯ ಸಂಚಲನ ಪ್ರಾರಂಭವಾಗಿದೆ. ಪ್ರಮುಖವಾಗಿ ಡಿ.ಪಾಳ್ಯ, ವಿದುರಾಶ್ವತ್ಥ ಹೆಚ್ಚು ಚರ್ಚಿತವಾಗುತ್ತಿರುವ ಜಿ.ಪಂ. ಕ್ಷೇತ್ರಗಳಾಗಿವೆ.

ಡಿ.ಪಾಳ್ಯ, ವಿದುರಾಶ್ವತ್ಥ ಸಾಮಾನ್ಯ ವರ್ಗಕ್ಕೆ ಮೀಸಲಿವೆ. ಈ ಹಿಂದೆ ಸಾಮಾನ್ಯವರ್ಗದ ಕ್ಷೇತ್ರಗಳು ಹೆಚ್ಚು ಚರ್ಚಿತವಾಗದೆ ಪ್ರಬಲ ಕೋಮಿನ ಪಾಲಾಗುತಿತ್ತು. ಆದರೆ ಇತ್ತೀಚೆಗೆ ಎಲ್ಲಾ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ ಜಾಗೃತಗೊಂಡಿರುವುದರಿಂದ ಎಲ್ಲಾ ಸಾಮಾನ್ಯ ಮೀಸಲು ಕ್ಷೇತ್ರಗಳು ಒಂದೇ ಸಮುದಾಯಕ್ಕೆ ಎಲ್ಲಾ ಕಾಲಕ್ಕೂ ಯಾಕೆ ಮೀಸಲಾಗಬೇಕು. ಸ್ಪರ್ಧಿಸಲು ಎಲ್ಲರಿಗೂ ಅವಕಾಶವಿರುವುದರಿಂದ ನಮಗೂ ನೀಡಲಿ ಎಂಬ ಮಾತು ಕೇಳಿ ಬರುತ್ತಿದೆ.

ಡಿ.ಪಾಳ್ಯ ಕ್ಷೇತ್ರಕ್ಕೆ ಜಿ.ಪಂ ಮಾಜಿ ಅಧ್ಯಕ್ಷ ಕೆ.ಎನ್.ಕೇಶವರೆಡ್ಡಿ ಕಾಂಗ್ರೆಸ್ ಪಕ್ಷದ ಟಿಕೇಟಿನ ಪ್ರಬಲ ಆಕಾಂಕ್ಷಿಯಾಗಿದ್ದಾರೆನ್ನಲಾಗಿದೆ. ಆದರೆ ಇದಕ್ಕೆ ಸವಾಲು ಎಂಬಂತೆ ಅದೇ ಪಕ್ಷದ ಬ್ಲಾಕ್ ಕಾಂಗ್ರೆಸ್ ಹಿಂದುಳಿದವರ್ಗಗಳ ಅಧ್ಯಕ್ಷ ಜಿ.ಗಂಗಾಧರ, ಇತ್ತೀಚೆಗೆ ಸಮಾಜ ಸೇವೆ ಹೆಸರಿನಲ್ಲಿ ರಾಜಕಾರಣದತ್ತ ಹೆಜ್ಜೆ ಹಾಕಲು ಮುಂದಾಗಿರುವ ಹೊಂಗಿರಣ ಜನ ಸೇವಾ ಟ್ರಸ್ಟ್‌ನ ವಿ.ಲಕ್ಷ್ಮಸಾಗರ್, ರಮೇಶನಾಯಕ, ತೇಜಸ್‌ರೆಡ್ಡಿ ಸಹ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ ಎಂದು ತಿಳಿದು ಬಂದಿದೆ.







ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪದವಿಯಿಂದ ಕೆಳಗಿಳಿದಿರುವ ಕೇಶವರೆಡ್ಡಿಯು ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಸ್ಥಾನ ಕಳೆದುಕೊಂಡರೆ ರಾಜಕೀಯವಾಗಿ ಮುಂದುವರೆಯಲು ಜಿ.ಪಂ. ಚುನಾವಣೆಗೆ ಸ್ಪರ್ಧಿಸುವುದು ಅನಿವಾರ್ಯ ಎನ್ನಲಾಗುತ್ತಿದೆ. ಆದ್ದರಿಂದ ಇದು ತೀವ್ರ ಕುತೂಹಲದ ಕ್ಷೇತ್ರವಾಗಿದೆ.

ಕೆಎಚ್‌ಪಿ ಪಕ್ಷದಲ್ಲಿ ಶಾಸಕರ ಆಪ್ತ ಶ್ರೀನಿವಾಸಗೌಡ, ಜಿ.ಪಂ ಮಾಜಿ ಉಪಾಧ್ಯಕ್ಷ ರಾಘವೇಂದ್ರ ಹನುಮಾನ್, ಆರ್.ಆರ್. ರೆಡ್ಡಿ, ಹಿರೇಬಿದನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ವಿಜಯರಾಘವರೆಡ್ಡಿ ಪ್ರಬಲ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಎನ್‌ಡಿಎ ಅಭ್ಯರ್ಥಿಯಾಗಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಿ.ಮಂಜುನಾಥರೆಡ್ಡಿ, ಕೆಂಪರಾಜು ಬಣದಿಂದ ಆದಿಮೂರ್ತಿರೆಡ್ಡಿ ಟಿಕೇಟು ಆಕಾಂಕ್ಷಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಇದರಂತೆ ವಿದುರಾಶ್ವತ್ಥ ಕ್ಷೇತ್ರವು ತುರುಸಿನ ಸ್ಪರ್ಧಾ ಕ್ಷೇತ್ರವಾಗಿದೆ. ಕಾಂಗ್ರೆಸ್ ಪಕ್ಷದಿಂದ ಮಾಜಿ ಸಚಿವ ಎನ್. ಎಚ್.ಶಿವಶಂಕರರೆಡ್ಡಿಯ ಪುತ್ರ ಭಾರ್ಗವರೆಡ್ಡಿ ಅಥವಾ ಅವರ ಸೊಸೆ ತೇಜಾರೆಡ್ಡಿ, ಎನ್‌ಡಿಎಯಿಂದ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎನ್.ಎಂ.ರವಿನಾರಾಯಣರೆಡ್ಡಿಯ ಪತ್ರ ಭರತ್‌ರೆಡ್ಡಿ, ಜಿ.ಪಂ. ಮಾಜಿ ಅಧ್ಯಕ್ಷ ಸಿ.ಆರ್.ನರಸಿಂಹಮೂರ್ತಿ, ಕೆಎಚ್‌ಪಿಯಿಂದ ಮಾಜಿ ಶಾಸಕಿ ಎನ್.ಜ್ಯೋತಿರೆಡ್ಡಿಯ ಪುತ್ರಿ ಸೌಮ್ಯರೆಡ್ಡಿ, ವಕೀಲ ರಂಗರಾಜು, ಕೆಂಪರಾಜು ಬಣದಿಂದ ನರೇಶ್‌ರೆಡ್ಡಿ ಟಿಕೇಟು ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ ಎನ್ನಲಾಗುತ್ತಿದೆ.

ತಾಲೂಕಿನ ಪ್ರಭಾವಿ ರಾಜಕಾರಣಿಗಳಾಗಿರುವ ಜ್ಯೋತಿರೆಡ್ಡಿ, ಎನ್.ಎಚ್.ಶಿವಶಂಕರರೆಡ್ಡಿ ಮತ್ತು ಎನ್.ಎಂ.ರವಿನಾರಾಯಣರೆಡ್ಡಿ ತಮ್ಮ ಕುಟುಂಬದ ಕುಡಿಗಳನ್ನು ರಾಜಕಾರಣ ಪ್ರವೇಶ ಮಾಡಿಸುವ ಮೂಲಕ ತಮ್ಮ ಕುಟುಂಬದ ಆಧಿಪತ್ಯ ರಾಜಕೀಯ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಬೇಕಾಗಿದೆ. ಇದು ಅವರಿಗೆ ಅನಿವಾರ್ಯ ಮತ್ತು ಕುಟುಂಬಗಳ ರಾಜಕಾರಣದ ಮುಂದುವರಿಕೆಗೆ ಇರುವ ಪ್ರಮುಖ ಹೆದ್ದಾರಿ ಎನ್ನಲಾಗುತ್ತಿದೆ. ಈ ಮೂರೂ ಕುಟುಂಬಗಳು ರಾಜಕೀಯ ಪ್ರಬಲ ಹಿನ್ನೆಲೆ ಉಳ್ಳವಾಗಿರುವುದರಿಂದ ಸಹಜವಾಗಿ ಸ್ಪರ್ಧೆಯ ಆಕಾಂಕ್ಷೆ ತೀವ್ರವಾಗಿಯೇ ಇರುತ್ತದೆ. ಇತರರಂತೆ ಇದು ಕೇವಲ ಒಂದು ಕಲ್ಲು ಒಗೆಯುವ ತಂತ್ರವಾಗಿರುವುದಿಲ್ಲ. ಆದ್ದರಿಂದ ಈ ಎರಡೂ ಕ್ಷೇತ್ರಗಳು ತಾಲ್ಲೂಕಿನ ರಾಜಕಾರಣದ ತೀವ್ರ ಗಮನವನ್ನು ಸೆಳೆಯುತ್ತಿವೆ. ರಾಜಕಾರಣಿಗಳ ನಿದ್ದೆ ಕೆಡಿಸಿವೆ.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515